ಸಂಪುಟ: 01 ಸಂಚಿಕೆ: 88 ಪುಟ: 04 ಬೆಲೆ: 02 ಶನಿವಾರ ಸೆಪ್ಟೆಂಬರ್ 12 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 88 Pages:04 Price:02 SATURDAY SEPTEMBER 12 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಕೆಲವರಿಗೆ ಅರ್ಹತೆ ಇದ್ದಾಗ ಅದೃಷ್ಟ ಇರಲ್ಲ ಅದೃಷ್ಟ ಇದ್ದಾಗ ಅವಕಾಶ ಇರಲ್ಲ.ಕೆಲವೊಮ್ಮೆ ಎಲ್ಲ ಇದ್ದಾಗ ಅನುಭವಿಸೊ ಯೋಗನೇ ಇರಲ್ಲ.

ವಾಣಿ ಭಂಡಾರಿ.

## ಶಿಕ್ಷಣ ಸೇವಾ ರತ್ನ ಪ್ರಶಸ್ತಿಗೆ ಬೀರಪ್ಪ ಅಂಡಗಿ ಆಯ್ಕೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ವಿಕಲಚೇತನ ನೌಕರರ ಹಾಗೂ ಎನ್.ಪಿ.ಎಸ್.ನೌಕರರ ಸಂಘದ ರಾಜ್ಯಾಧ್ಯಕ್ಷ ಹಾಗೂ ಸರಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಬೀರಪ್ಪ ಅಂಡಗಿ ಅವರಿಗೆ ಕರ್ನಾಟಕ ಪ್ರಸ್ ಕ್ಲಬ್ ಬೆಂಗಳೂರು ವತಿಯಿಂದ ನೀಡಲಾಗುವ ರಾಜ್ಯ ಮಟ್ಟದ ಶಿಕ್ಷಣ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.**



ಶಿಕ್ಷಕರ ದಿನಾಚರಣೆಯ ಅಂಗವಾಗಿ ಸೆ.20 ರ ಭಾನುವಾರ ಬೆಂಗಳೂರು ನಗರದ ಟೌನ್ ಹಾಲ್ ನಲ್ಲಿ ಹಮ್ಮಿಕೊಂಡಿರುವ "ಗುರು ನಮನ" ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ತಾಲ್ಲೂಕಿನ ಬಹದ್ದೂರಬಂಡಿ ಶಾಲಾ ಮಕ್ಕಳಿಗೆ ತಮ್ಮ ಸ್ವಂತ ಖರ್ಚಿನಲ್ಲಿ ವಿಮಾನ ಪ್ರಯಾಣ ಸೇರಿದಂತೆ ಶಾಲಾ ಶೈಕ್ಷಣಿಕ ಪ್ರಗತಿಯನ್ನು ಜೊತೆಯಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಘದ ಕಾರ್ಯದರ್ಶಿ ಗಂಗಾಧರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಗದಿತ ಅವಧಿಯೊಳಗೆ ಜನನ ನೋಂದಣಿ ಕಡ್ಡಾಯ: ಡಾ.ಸುರೇಶ ಬಿ.ಇಟ್ನಾಳ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜಿಲ್ಲೆಯಲ್ಲಿ ಬೆಳೆ ಕಟಾವು ಪ್ರಯೋಗಗಳು ಮತ್ತು ಜನನ, ಮರಣ ಘಟನೆ ವಿವರ ನೋಂದಣಿಯಲ್ಲಿ ವಿಳಂಬ ತೋರುವಂತಿಲ್ಲ, ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ನಿಗಾ ವಹಿಸಬೇಕು. ಮಗುವಿನ ಜನನದ 21 ದಿನಗಳೊಳಗಾಗಿ ಜನನ ನೋಂದಣಿ ಕಡ್ಡಾಯವಾಗಿ ಆಗಬೇಕು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು. ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ನಾಗ-ರಿಕ ನೋಂದಣಿ ಪದ್ಧತಿಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**

ಜಿಲ್ಲೆಯಲ್ಲಿ ಜನನ ಮತ್ತು ಮರಣ ಘಟನೆ ವಿವರಗಳನ್ನು ನಿಗದಿತ ಅವಧಿಯೊಳಗೆ ತಪ್ಪದೇ ಮಾಹಿತಿ ನೋಂದಾಯಿಸಿಕೊಂಡು, ಸಂಬಂಧಿಸಿದ ಕುಟುಂಬದವರಿಗೆ ಪ್ರಮಾಣಪತ್ರ ವಿತರಣೆ ಮಾಡಬೇಕು. ಅವರನ್ನು ಕಚೇ-ರಿಗಳಿಗೆ ಅಲೆದಾಡಿಸುವಂತಿಲ್ಲ. ಮಗು ಜನಿಸಿದ 21 ದಿನಗಳೊಳಗಾಗಿ ಶುಲ್ಕ ರಹಿತವಾಗಿ ಜನನ ನೋಂದಣಿ ಮಾಡಬೇಕು. ಪ್ರಸ್ತುತ ಬಹುತೇಕ ಸಾಂಸ್ಥಿಕ ಹೆರಿಗೆಗಳೇ ಆಗುತ್ತಿರುವುದರಿಂದ ಸಂಬಂಧಿಸಿದ ವೈದ್ಯರು, ಆಸ್ಪತ್ರೆಯವರು ನಿಗದಿತ ಅವಧಿಯೊಳಗೆ ಜನನ ನೋಂದಣಿಗೆ ಅರ್ಜಿ



ಸಲ್ಲಿಸಬೇಕು. ಈ ಬಗ್ಗೆ ಮಗುವಿನ ಪೋಷಕರಿಗೆ ಸೂಕ್ತ ತಿಳುವಳಿಕೆ ನೀಡಬೇಕು ಎಂದು ತಿಳಿಸಿದರು. ನಾಗರಿಕ ನೋಂದಣಿ ಪದ್ಧತಿಯಡಿ ಎಲ್ಲ ಜನನ ಮರಣ ಹಾಗೂ ನಿರ್ಜೀವ ಜನನಗಳನ್ನು ಜನನ ಮರಣ ನೋಂದಣಿ ಅಧಿನಿಯಮಗಳು 1969 ಹಾಗೂ ಕರ್ನಾಟಕ ಜನನ ಮರಣ ನೋಂದಣಿ ನಿಯಮಗಳು 1999 ರನ್ವಯ 21 ದಿನಗಳೊಳಗಾಗಿ ಶುಲ್ಕ ರಹಿತವಾಗಿ ಕಡ್ಡಾಯವಾಗಿ ನೋಂದಣಿ ಮಾಡಬೇಕು.

ಸಾಂಪ್ರದಾಯಿಕ ನಾಮಕರಣದ ನಂತರ ನೋಂದಣಿ ಮಾಡುವುದಾಗಿ ಪೋಷಕರು ಹೇಳಿದಲ್ಲಿ 21 ದಿನದೊಳಗೆ ಪೋಷಕರ ಹೆಸರಿನೊಂದಿಗೆ ನೋಂದಣಿ ಮಾಡಿಕೊಂಡು ನಂತರದಲ್ಲಿ ಮಗುವಿನ ಹೆಸರು ನೋಂದಣಿ ಮಾಡಲು ಅವಕಾಶವಿದೆ ಎಂದು ಪೋಷಕರಿಗೆ ಮನವರಿಕೆ ಮಾಡಿ. ಯಾವುದೇ ಆಸ್ಪತ್ರೆ, ವೈದ್ಯಕೀಯ ಸಂಸ್ಥೆಗಳಲ್ಲಿ ಮರಣ ಸಂಭವಿಸದೇ ಇದ್ದಲ್ಲಿ ನಿಗದಿತ ನಮೂನೆಯಲ್ಲಿ ಶೂನ್ಯ ವರದಿಯನ್ನು ಕಡ್ಡಾಯವಾಗಿ

> **“ ಜನನ ಮರಣ ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬ ಮಾಡಿದಲ್ಲಿ ಅಂತಹ ವೈದ್ಯರು, ವೈದ್ಯಕೀಯ ಸಂಸ್ಥೆಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು. ಸಾಂಖ್ಯಿಕ ಇಲಾಖೆಗೆ ಬಂದ ಮರಣ ವರದಿಯನ್ನು ಫಲಾನುಭವಿ ಆಧಾರಿತ ಯೋಜನೆ ಅನುಷ್ಠಾನಗೊಳಿಸುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿ ಇಲಾಖೆ, ಆಹಾರ ಇಲಾಖೆ, ಬ್ಯಾಂಕ್‌ಗಳು ಮುಂತಾದ ಇಲಾಖೆಗೆ ಕಳುಹಿಸಿ. ಇದ-ರಿಂದ ಫಲಾನುಭವಿಗಳ ಪಟ್ಟಿಯಿಂದ ಮೃತರ ಹೆಸರನ್ನು ತೆಗೆದು ಹಾಕಲು ಅನುಕೂಲವಾಗುತ್ತದೆ ಮತ್ತು ಮೃತರ ಖಾತೆಗೆ ಸರ್ಕಾರದ ಹಣ ಜಮೆಯಾಗುವುದು ಕೂಡ ತಪ್ಪುತ್ತದೆ ಎಂದು ಅವರು ಸೂಚನೆ ನೀಡಿದರು. ಮರಣ ಘಟನೆ ವಿವರ ನೋಂದಣಿಯಲ್ಲಿ ವಿಳಂಬವಾಗಿದ್ದು, ಎಲ್ಲಾ ಘಟನೆಗಳನ್ನು ನಿಗದಿತ ಸಮಯದಲ್ಲಿ ನೋಂದಣಿ ಮಾಡಲು ಸಂಬಂಧಿಸಿದ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.**

ಸಲ್ಲಿಸಬೇಕು. ಮರಣ ಸಂಭವಿಸಿಲ್ಲ ಎಂದು ವರದಿ ನೀಡದೇ ಇರಬಾರದು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜನನ ಮರಣ ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬ ಮಾಡಿದಲ್ಲಿ ಅಂತಹ ವೈದ್ಯರು, ವೈದ್ಯಕೀಯ ಸಂಸ್ಥೆಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು. ಸಾಂಖ್ಯಿಕ ಇಲಾಖೆಗೆ ಬಂದ ಮರಣ ವರದಿಯನ್ನು ಫಲಾನುಭವಿ ಆಧಾರಿತ ಯೋಜನೆ ಅನುಷ್ಠಾನಗೊಳಿಸುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿ ಇಲಾಖೆ, ಆಹಾರ ಇಲಾಖೆ, ಬ್ಯಾಂಕ್‌ಗಳು ಮುಂತಾದ ಇಲಾಖೆಗೆ ಕಳುಹಿಸಿ. ಇದರಿಂದ ಫಲಾನುಭವಿಗಳ ಪಟ್ಟಿಯಿಂದ ಮೃತರ ಹೆಸರನ್ನು ತೆಗೆದು ಹಾಕಲು ಅನುಕೂಲವಾಗುತ್ತದೆ ಮತ್ತು ಮೃತರ ಖಾತೆಗೆ ಸರ್ಕಾರದ ಹಣ ಜಮೆಯಾಗುವುದು ಕೂಡ ತಪ್ಪುತ್ತದೆ ಎಂದು ಅವರು ಸೂಚನೆ ನೀಡಿದರು. ಮರಣ ಘಟನೆ ವಿವರ ನೋಂದಣಿಯಲ್ಲಿ ವಿಳಂಬವಾಗಿದ್ದು, ಎಲ್ಲಾ ಘಟನೆಗಳನ್ನು ನಿಗದಿತ ಸಮಯದಲ್ಲಿ ನೋಂದಣಿ ಮಾಡಲು ಸಂಬಂಧಿಸಿದ ವೈದ್ಯಾಧಿಕಾ-ರಿಗಳಿಗೆ ಸೂಚನೆ ನೀಡಿದರು.

ಸಾರ್ವಜನಿಕರನ್ನು ಜನನ ಮತ್ತು ಮರಣ ಪ್ರಮಾಣಪತ್ರಕ್ಕಾಗಿ ಅಲೆದಾಡಿಸಬಾರದು. ಸರ್ಕಾರದ ಮಾರ್ಗಸೂಚಿಯಂತೆ 21 ದಿನಗಳಲ್ಲಿ ಜಿಲ್ಲೆಯಲ್ಲಿ ಪ್ರಮಾಣ ಪತ್ರಗಳನ್ನು ಕುಟುಂಬಸ್ಥ-ರಿಗೆ ನೀಡಬೇಕು. ಅದೇರೀತಿಯಾಗಿ ಮರಣ ಘಟನೆ ಸಂಭವಿಸಿದಲ್ಲಿ ಮೂರು ದಿನದೊಳಗೆ ನಗರ ಸ್ಥಳೀಯ-ಸಂಸ್ಥೆಗಳ ಸಿಬ್ಬಂದಿ ಮನೆ ಭೇಟಿ ನಡೆಸಿ ಪೂರಕ ದಾಖಲೆ ಪಡೆದು ಪ್ರಮಾಣಪತ್ರ ವಿತರಿಸಬೇಕು ಎಂದು ತಿಳಿಸಿದರು.

3ನೇ ಪುಟಕ್ಕೆ

## ಇರಕಲ್‌ಗಡಾದಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಆತ್ಮಹತ್ಯೆ ತಡೆಗಟ್ಟುವ ಕುರಿತು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಅನುಷ್ಠಾನ ಅಧಿಕಾರಿಗಳ ಕಚೇರಿ, ಕೊಪ್ಪಳ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು, ಇರಕಲ್‌ಗಡಾ ಇವರ ಸಂಯುಕ್ತಾಶ್ರಯದಲ್ಲಿ ಗುರುವಾರ (ಸೆ. 10ರಂದು) ಇರಕಲ್‌ಗಡಾದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಭಾಭವನದಲ್ಲಿ "ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ" ಕಾರ್ಯಕ್ರಮ ನಡೆಯಿತು.**

ಕೊಪ್ಪಳ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ್ಮ ಕೆ. ಅವರು ಮಾತನಾಡಿ, ಪ್ರತಿವರ್ಷ ಸೆಪ್ಟೆಂಬರ್ 10ರಂದು ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನವನ್ನು ಆಚರಿಸಲಾಗುತ್ತಿದ್ದು, ಈ ವರ್ಷದ ಘೋಷವಾಕ್ಯ "ಆತ್ಮಹತ್ಯೆಯ ನಿರೂಪಣೆಯನ್ನು ಬದಲಾಯಿಸೋಣ" ಎಂಬುದಾಗಿದೆ ಎಂದು ತಿಳಿಸಿದರು. ಆತ್ಮಹತ್ಯೆ ತಡೆಗಟ್ಟುವಲ್ಲಿ ಪ್ರತಿಯೊಬ್ಬರ ಪಾತ್ರವೂ ಮಹತ್ವದ್ದಾಗಿದೆ. ಜೀವನದಲ್ಲಿ ಎದುರಾಗುವ ಯಾವುದೇ ಸಮಸ್ಯೆಗೆ ಆತ್ಮಹತ್ಯೆ ಪರಿಹಾರವಲ್ಲ. ಮಾನಸಿಕ ಒತ್ತಡ, ಖಿನ್ನತೆ ಅಥವಾ ಇತರ ಸಮಸ್ಯೆಗಳು ಎದುರಾದಾಗ ಕುಟುಂಬದವರು, ಸ್ನೇಹಿತರು ಹಾಗೂ ಸಹೋದ್ಯೋಗಿಗಳೊಂದಿಗೆ ಸಮಸ್ಯೆಗಳನ್ನು ಹಂಚಿಕೊಳ್ಳಬೇಕು. ಅಗತ್ಯವಿದ್ದಲ್ಲಿ ಮಾನಸಿಕ ಆರೋಗ್ಯ ತಜ್ಞರನ್ನು ಸಂಪರ್ಕಿಸಿ ಸೂಕ್ತ ಸಲಹೆ ಮತ್ತು ಚಿಕಿತ್ಸೆಯನ್ನು ಪಡೆಯಬೇಕು ಎಂದು ಅವರು ಹೇಳಿದರು.

ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗ, ಧ್ಯಾನ, ಸಂಗೀತ, ದೈಹಿಕ ಚಟುವಟಿಕೆ, ಪೌಷ್ಟಿಕ ಆಹಾರ ಹಾಗೂ ಉತ್ತಮ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು. ರೈತರು, ನಿರುದ್ಯೋಗಿಗಳು, ಕೌಟುಂಬಿಕ ಸಮಸ್ಯೆ ಎದುರಿಸುತ್ತಿರುವವರು ಸೇರಿದಂತೆ ಯಾರೂ ಆತ್ಮಹತ್ಯೆಯಂತಹ ನಿರ್ಧಾರ ಕೈಗೊಳ್ಳದಂತೆ ಸುತ್ತಮುತ್ತಲಿನವ-ರಿಗೆ ಧೈರ್ಯ ಮತ್ತು ಬೆಂಬಲ ನೀಡಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ನಾಗಪುಷ್ಪಲತಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ (ಪ್ರ), ಸಹಾಯಕ ಉಪನ್ಯಾಸಕರು, ಎಸ್‌ಟಿ-ಎಲ್‌ಎಸ್ ಕಾರ್ಯಕ್ರಮದ ಇಬ್ರಾಹಿಂ, ಆರೋಗ್ಯ ನಿರೀಕ್ಷಣಾಧಿಕಾರಿ ಧನರಾಜ್, ಆಶಾ ಕಾರ್ಯಕರ್ತೆಯರು, ವಿದ್ಯಾರ್ಥಿಗಳು ಹಾಗೂ ಇತರ ಸಿಬ್ಬಂದಿ ಭಾಗವಹಿಸಿದ್ದರು. ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು.

## ಕನಕಗಿರಿ ಶ್ರೀಕನಕಚಲಪತಿ ಲಕ್ಷ್ಮೀನರಸಿಂಹ ಸ್ವಾಮಿ ದೇವರ ದರ್ಶನಕ್ಕೆ ಭಕ್ತರ ದಂಡು

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ ಪಟ್ಟಣದ: ಶುಕ್ರವಾರದಂದು ಶ್ರಾವಣ ಮಾಸದ ಅಮಾವಾಸ್ಯೆಯ ಪ್ರಯುಕ್ತ ದೇವರ ದರ್ಶನಕ್ಕೆ ಭಕ್ತರ ದಂಡು ಕನಕಗಿರಿಯ ಆರಾಧ್ಯ ದೈವ ಶ್ರೀಕನಕಚಲಪತಿ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯವು ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವ ಹೊಂದಿರುವ ಕನಕಗಿರಿಯ ಶ್ರೀಕನಕಚಲಪತಿ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯವು ಭಕ್ತರ ಆರಾಧನೆಯ ಪ್ರಮುಖ ಕ್ಷೇತ್ರವಾಗಿ ಪ್ರಸಿದ್ಧವಾಗಿದೆ.**



ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ದರ್ಶನಕ್ಕಾಗಿ ಜಿಲ್ಲೆ ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ವಿಶೇಷ ಪೂಜೆ, ಅರ್ಚನೆ ಹಾಗೂ ಸೇವೆಗಳನ್ನು ಸಲ್ಲಿಸುತ್ತಿದ್ದಾರೆ. ಶ್ರೀ ಕನಕಚಲಪತಿ ಲಕ್ಷ್ಮೀನರಸಿಂಹ ಸ್ವಾಮಿಯನ್ನು ಭಕ್ತಿಯಿಂದ ಆರಾಧಿಸಿದರೆ ಕುಟುಂಬದಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ದೇವಾಲಯದ ಧಾರ್ಮಿಕ ವಾತಾವರಣ, ವಿಶೇಷ ಪೂಜಾ ಕೈಂಕರ್ಯಗಳು ಹಾಗೂ ಭಕ್ತರ ಭಜನೆ-ಕೀರ್ತನೆಗಳು ಕ್ಷೇತ್ರದ ಆಧ್ಯಾತ್ಮಿಕ ಮೆರುಗನ್ನು ಹೆಚ್ಚಿಸುತ್ತವೆ,

ಪ್ರತಿದಿನ ಸ್ವಾಮಿಗೆ ಪಂಚಾಮೃತ ಅಭಿಷೇಕ ವಿಶೇಷ ಅಲಂಕಾರ, ಮಹಾಮಂಗಳಾರತಿ ಪೂಜೆ ಪ್ರತಿದಿನ ಅನ್ನ ಪ್ರಸಾದ ಕಾರ್ಯಕ್ರಮ ಇರುತ್ತದೆ ಹಬ್ಬ ಹರಿದಿನಗಳಲ್ಲಿ ವಿಶೇಷವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಸಾವಿರಾರು ಭಕ್ತರು ಕ್ಷೇತ್ರಕ್ಕೆ ಭೇಟಿ ನೀಡಿ ಸ್ವಾಮಿಯ ದರ್ಶನ ಪಡೆದು ಪ್ರಸಾದ ಸ್ವೀಕರಿಸುತ್ತಾರೆ. ಕನಕಗಿರಿಯ ಶ್ರೀ ಕನಕಚಲಪತಿ ಲಕ್ಷ್ಮೀನರಸಿಂಹ ಸ್ವಾಮಿ ದೇವರ ಕ್ಷೇತ್ರವು ಭಕ್ತಿ, ಪರಂಪರೆ ಮತ್ತು ಧಾರ್ಮಿಕ ನಂಬಿಕೆಯ ಪ್ರತೀಕವಾಗಿ ಇಂದಿಗೂ ಭಕ್ತರನ್ನು ತನ್ನತ್ತ ಸೆಳೆಯುತ್ತಿದೆ. "ಶ್ರೀಕನಕಚಲಪತಿ ಲಕ್ಷ್ಮೀನರಸಿಂಹ ಸ್ವಾಮಿಯ ಕೃಪೆ ಎಲ್ಲರ ಮೇಲಿರಲಿ" ಎಂಬ ಪ್ರಾರ್ಥನೆಯೊಂದಿಗೆ ಭಕ್ತರು ದೇವರ ದರ್ಶನ ಪಡೆಯುತ್ತಿದ್ದಾರೆ.

## ವಿದ್ಯಾಶ್ರೀ ಶಾಲಾ ವಿದ್ಯಾರ್ಥಿನಿಯರಿಗೆ ತಾಲೂಕು ಮಟ್ಟದ ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ ಸ್ಥಾನ



ಅ.ಶ. ಸುದ್ದಿ ಕುಕನೂರು

**ಕುಕನೂರು: ಇಂದು ನಡೆದ ಪ್ರೌಢಶಾಲೆಗಳ ತಾಲೂಕು ಮಟ್ಟದ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಕೂಟದಲ್ಲಿ ವಿದ್ಯಾಶ್ರೀ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇದರೊಂದಿಗೆ ವಿದ್ಯಾರ್ಥಿನಿಯರು ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.**

ವಿದ್ಯಾರ್ಥಿನಿಯರ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಜಯವಂತ ರಾಜ್ ಜೈನ್, ಉಪಾಧ್ಯಕ್ಷರಾದ ಶರಣಪ್ಪ ಅರಿಕೇರಿ, ನಿರ್ದೇಶಕ ಮಂಡಳಿಯ ಸದಸ್ಯರಾದ ಮಧುಸೂದನ ದೇಸಾಯಿ, ರಾಜಶೇಖರ್ ಹೊಸಮನಿ ಹಾಗೂ ಮುಖ್ಯೋಪಾಧ್ಯಾಯರು ಮತ್ತು ಎಲ್ಲಾ ಶಿಕ್ಷಕ-ಶಿಕ್ಷಕಿಂ-ಯರ ವೃಂದ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ, ಜಿಲ್ಲಾ ಮಟ್ಟದಲ್ಲಿಯೂ ಉತ್ತಮ ಸಾಧನೆ ಮಾಡುವಂತೆ ಶುಭ ಹಾರೈಸಿದ್ದಾರೆ.

ಕ್ರೀಡಾ ಸಾಧನೆಗೆ ದೈಹಿಕ ಶಿಕ್ಷಕರಾದ ಕೃಷ್ಣ ಬಿ. ವಿದ್ಯಾಪತಿ, ಪ್ರಭು ಬುಗುಟುಗಾರ್ ಹಾಗೂ ಅನ್ವರ್ ಪಾಷಾ ಅವರ ಮಾರ್ಗದರ್ಶನವೂ ಕಾರಣವಾಗಿದೆ. ವಿದ್ಯಾರ್ಥಿನಿಯರ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ಪೋಷಕರು ಸಂತಸ ವ್ಯಕ್ತಪಡಿಸಿದ್ದಾರೆ.

# ಶಿಕ್ಷಕರಲ್ಲಿ ಆದರ್ಶ ನೀತಿಗಳು ಬದಲಾವಣೆ ತರುತ್ತವೆ–ಯಶವಂತರಾಯಗೌಡರು

ಅ.ಶ. ಸುದ್ದಿ ಇಂಡಿ

**ಇಂಡಿ: ಆದರ್ಶವಾದಂತಹ ನೀತಿಗಳು ಬದಲಾವಣೆ ತರಬೇಕಾಗಿದ್ದು ಶಿಕ್ಷಣ ವಲಯದಲ್ಲಿ ಶಿಕ್ಷಕರಲ್ಲಿ ಬಂದಾಗ ಸಾಧ್ಯ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಗುರುಭವನದಲ್ಲಿ ಹಮ್ಮಿಕೊಂಡ ಡಾ. ಎಸ್ ರಾಧಾಕೃಷ್ಣನ್ ರವರ ಜನ್ಮದಿನೋತ್ಸವದ ಅಂಗವಾಗಿ ಶಿಕ್ಷಕರ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.**

ಶಿಕ್ಷಕ ಆದರ್ಶವಾಗಿ ಕೆಲಸ ಮಾಡಿದರೆ ಸಮಾಜ ದೇಶ ಅಭಿವೃದ್ಧಿಹೊಂದುತ್ತದೆ. ಮಗುವಿಗೆ ಗುಣಾತ್ಮಕ ಶಿಕ್ಷಣ ನೀಡಿದರೆ ಒಳ್ಳೆಯ ವಿದ್ಯಾರ್ಥಿಗಳಾಗಿ ಹೊರಹೋಮ್ಮುತ್ತಾರೆ. ಪಾಲಕ ಪೋಷಕರು



ಕೇವಲ ಅಂಕಗಳಿಗೆ ಮಾತ್ರ ಶಿಕ್ಷಣ ಕೊಡಬೇಡಿ ಆದರ್ಶ ನೀತಿ ಮಾನವೀಯ ಮೌಲ್ಯಗಳು ಬೆಳೆಸಿ , ಇಂದಿನ ಅವಿಸ್ಕಾರಗಳಿಗೆ ಅನುಗುಣವಾಗಿ ಶಿಕ್ಷಣ ನೀಡಿ. ರಾಧಾಕೃಷ್ಣನ್ ಒಬ್ಬ ಶಿಕ್ಷಕರಾಗಿ ಭಾರತದ ಉಪರಾಷ್ಟ್ರಪತಿಗಳಾಗಿ ದೇಶ ಸೇವೆ ಮಾಡಿದ್ದಾರೆ ಇಂತಹ ಮಹಾನ್ ದಾರ್ಶನಿಕರ ಸಾಲಿನಲ್ಲಿ ಸೇರಬೇಕಾದರೆ ಆದರ್ಶ ಜೀವನ ಸಾಗಿಸಿದರೆ ಸಮಾಜ ನಿಮ್ಮನ್ನು ಗುರುತಿಸುತ್ತದೆ ಎಂದರು. ಭೀಮಣ್ಣಾ ಕೌಲಗಿ, ಅಜೀತ ಧನಶೇಟ್ಟಿ, ಪ್ರಶಾಂತ ಕಾಳೆ, ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಶೀಲ್ದಾರ ನಾಗೇಂದ್ರ ಕೊಳಶೇಟ್ಟಿ, ಪೊಲೀಸ್ ಉಪಾಧೀಕ್ಷಕ ಸದಾಶಿವ ಕಟ್ಟಿಮನಿ, ಕ್ಷೇತ್ರ ಶಿಕ್ಷಣಾಧಿಕಾರಿ ಮೋಹನ್‌ಕುಮಾರ ಪಿ, ಶಿವಾನಂದ ಪೂಜಾರಿ, ವೇದಿಕೆಯಲ್ಲಿದ್ದರು.

ಸಿದ್ದೇಶ್ವರ ಗುರುದೇವಾಶ್ರಮ ಸಾಲೋಟ-ಗಿಯ ಪೂಜ್ಯ ಶ್ರೀ ಸಂಗಮೇಶ್ವರ ಸ್ವಾಮಿಗಳು ದಿವ್ಯಸಾನಿಧ್ಯವಹಿಸಿ, ಕ್ಷೇತ್ರ ಸಮನ್ವಯಾಧಿಕಾರಿ ಎಸ್ ಆರ್ ನಡಗಡ್ಡಿ , ಎ.ಸಿ ಹುಣಸಗಿ , ವಾಯ್ ಜಿ ಬಿರಾದಾರ ಮಾತನಾಡಿದರು. ನಿವೃತ್ತ ಶಿಕ್ಷಕ ವೈ.ಟಿ ಪಾಟೀಲ, ಆರ್.ವ್ಹಿ ಪಾಟೀಲ ಇವರ ಸೇವಾ ಅನುಭವ ಹಾಗೂ ಸಮಾಜ ಧಾರ್ಮಿಕ, ಸಾಹಿತಿಕ ಕಳಕಳಿ ಬಗ್ಗೆ ಶಿಕ್ಷಕ ಪಾಟೀಲ ಅನುಭವ ಹಂಚಿಕೊಂಡರು. ಅಲ್ಲಾಭಕ್ಷ ವಾಲೀಕಾರ , ಬಸವರಾಜ ರಾಹುರ ಎಸ್.ಎನ್ ಹರಳಯ್ಯಾ, ಈರಣ್ಣಾ ತಳವಾರ, ಎನ್ ಎಂ ಕಾಳೆ, ,ಡಾ.ಕಾಂತು ಇಂಡಿ, ಎಂ ಎಂ ವಾಲಿಕಾರ, ಬಸವರಾಜ ಮೇತ್ರಿ, ಆನಂದ ಕೆಂಬಾಗಿ, ಬಿ.ಎಂ ವಠಾರ, ಶ್ರೀದೇವಿ ಮುಗಳಿ, ವಿ.ಎನ್ ಡಿಸ್ಲೆ, ಜಯಶ್ರೀ ತೇಲಗ, ಪ್ರೇಮಾ ಹುಬ್ಬಳ್ಳಿ ,ಎ ಎಸ್ ಬಿರಾದಾರ, ಅಲ್ತಾಫ್ ಬೋರಾಮಣಿ, ಶಂಕರ ಕೋಳೇಕರ್, ಪ್ರಕಾಶ ಐರೋಡಗಿ, ಬಿ.ಸಿ ಭಗವಂತಗೌಡರ. ತಾಲೂಕಿನ ಎಲ್ಲ ಸಂಘಗಳ ಅಧ್ಯಕ್ಷರು ಪದಾಧಿಕಾರಿಗಳು ಸರ್ವಸದಸ್ಯರು ,ಶಿಕ್ಷಕ ಸಿಬಂದ್ದಿ ಉಪಸ್ಥಿತರಿದ್ದರು.

# ಭಾರತಕ್ಕೆ ಆಗಮಿಸಿದ ರಷ್ಯಾದ ಅಧ್ಯಕ್ಷ ಪುಟಿನ್, ಮೋದಿ ಜತೆ ಮಹತ್ವದ ಚರ್ಚೆ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ದ್ವಿಪಕ್ಷೀಯ ವ್ಯಾಪಾರ, ಹೂಡಿಕೆ ಮತ್ತು ಇಂಧನ ಸಹಕಾರವನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲು ಹಾಗೂ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಇಂದು ಭಾರತಕ್ಕೆ ಮೂರು ದಿನಗಳ ಭೇಟಿಯನ್ನು ಆರಂಭಿಸಿದರು.**

ಪುಟಿನ್ ಅವರೊಂದಿಗೆ ಉನ್ನತ ಮಟ್ಟದ ನಿಯೋಗವೂ ಆಗಮಿಸಿದೆ. 2022ರ ಫೆಬ್ರವರಿಯಲ್ಲಿ ಉಕ್ರೇನ್ ಸಂಘರ್ಷ ಆರಂಭವಾದ ಬಳಿಕ ರಷ್ಯಾದ ಹೊರಗೆ ನಡೆಯುತ್ತಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಅವರು ವೈಯಕ್ತಿಕವಾಗಿ ಭಾಗವಹಿಸುತ್ತಿರುವುದು ಇದೇ ಮೊದಲು. ಭಾರತದ ಆತಿಥ್ಯದಲ್ಲಿ ಶನಿವಾರದಿಂದ ಎರಡು ದಿನಗಳ ಕಾಲ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಆಹಾರ, ಇಂಧನ, ಆರೋಗ್ಯ, ವಿಪತ್ತು ನಿರ್ವಹಣೆ ಹಾಗೂ ಪ್ರಮುಖ ಪೂರೈಕೆ ಸರಪಳಿಗಳಲ್ಲಿ ಸಾಮೂಹಿಕ ಸ್ಥಿತಿಸ್ಥಾಪಕತ್ವ ಹೆಚ್ಚಿಸುವ ಕುರಿತು ಚರ್ಚೆ ನಡೆಯುವ ನಿರೀಕ್ಷೆಯಿದೆ. ಭೌಗೋಳಿಕ-ರಾಜಕೀಯ ಪರಿಸ್ಥಿತಿ ಬಿಗಡಾಯಿಸಿರುವ ಸಂದರ್ಭದಲ್ಲಿ ಬ್ರಿಕ್ಸ್ ಅನ್ನು ಪರಿಣಾಮಕಾರಿ ಜಾಗತಿಕ ವೇದಿಕೆಯಾಗಿ



ಬಿಂಬಿಸಲು ನವದೆಹಲಿ ಮುಂದಾಗಿದೆ.

ರಷ್ಯಾ-ಉಕ್ರೇನ್ ಸಂಘರ್ಷ, ಪಶ್ಚಿಮ ಏಷ್ಯಾದ ಬಿಕ್ಕಟ್ಟು, ಹಾರ್ಮುಜ್ ಜಲಸಂಧಿಯ ದಿಗ್ಬಂಧನ ಹಾಗೂ ಅಮೆ-ರಿಕದ ಟ್ರಂಪ್ ಆಡಳಿತದ ವ್ಯಾಪಾರ ಮತ್ತು ಸುಂಕ ನೀತಿಗಳ ಪರಿಣಾಮದಿಂದ ಜಾಗತಿ-ಕ ಆರ್ಥಿಕತೆ ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಈ ಶೃಂಗಸಭೆ ನಡೆಯುತ್ತಿದೆ. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್, ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ, ಇಂಡೋನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂಟೊ, ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್-ಸಿಸಿ, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ, ಅಬುಧಾಬಿ ಕ್ರೌನ್ ಪ್ರಿನ್ಸ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್, ಇಥಿಯೋಪಿಯಾ ಪ್ರಧಾನಿ ಅಬಿಯ್ ಅಹ್ಮದ್ ಅಲಿ ಹಾಗೂ ವಿಯೆಟ್ನಾಂ ಪ್ರಧಾನಿ ಲೆ ಮಿನ್ ಹಂಗ್ ಸೇರಿದಂತೆ ಹಲವು ಪ್ರಮುಖ ನಾಯಕರು ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ವಿಮಾನ ನಿಲ್ದಾಣದಲ್ಲಿ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೆ.ವಿ. ಸಿಂಗ್ ಅವರು ಪುಟಿನ್ ಅವರನ್ನು ಸ್ವಾಗತಿಸಿದರು. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ರಷ್ಯಾ ಮತ್ತು ಭಾರತವು ವಿಶೇಷ ಹಾಗೂ ವಿಶೇಷಾಧಿಕಾರಯುಕ್ತ ಕಾರ್ಯತಂತ್ರದ ಪಾಲುದಾರಿಕೆಯ ಆಧಾರದ ಮೇಲೆ ಬಹುಮುಖಿ ಮತ್ತು ದೀರ್ಘಕಾಲೀನ ಸಂಬಂಧ ಹೊಂದಿವೆ ಎಂದು ಹೇಳಿದರು.

ಮೋದಿ-ಪುಟಿನ್ ಮಾತುಕತೆ

ಪುಟಿನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಮಧ್ಯಾಹ್ನ ವ್ಯಾಪಕ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ರಕ್ಷಣೆ, ಇಂಧನ, ತಂತ್ರಜ್ಞಾನ, ಔಷಧೀಯ ಕ್ಷೇತ್ರ ಹಾಗೂ ಜನರ ನಡುವಿನ ವಿನಿಮಯ ಸೇ-ರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ವಿಸ್ತರಣೆಯ ಕುರಿತು ಚರ್ಚೆ ನಡೆಯುವ ನಿರೀಕ್ಷೆಯಿದೆ. ಬ್ರಹ್ಮೋಸ್ ಕ್ಷಿಪಣಿಗಳ ಉನ್ನತೀಕರಣದ ಕುರಿತು ಉಭಯ ದೇಶಗಳು ಪರಿಶೀಲನೆ ನಡೆಸುತ್ತಿವೆ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ತಿಳಿಸಿದ್ದಾರೆ. ಬಾಕಿ ಇರುವ ಎಸ್-400 ವ್ಯವಸ್ಥೆಗಳ ಪೂರೈಕೆಯನ್ನು ಪೂರ್ಣಗೊಳಿಸುವುದರ ಜೊತೆಗೆ ಪ್ರಸ್ತಾವಿತ ಸು-57 ಯುದ್ಧ ವಿಮಾನಗಳ ಪೂರೈಕೆ ಬಗ್ಗೆಯೂ ಚರ್ಚಿಸಲು ಮಾಸ್ಕೋ ಬದ್ಧವಾಗಿದೆ ಎಂದು ಅವರು ಹೇಳಿದ್ದಾರೆ. ಭಾರತದ ಹೊಸ ನಾಗರಿಕ ಪರಮಾಣು ರಿಯಾಕ್ಟರ್‌ಗಳನ್ನು ಸ್ಥಾಪಿಸುವ ಯೋಜನೆಗೆ ಸಂಬಂಧಿಸಿದಂತೆ ಮಾತುಕತೆ ನಡೆಸಲು ಎರಡೂ ದೇಶಗಳು ಮುಂದಾಗುತ್ತಿವೆ.

ಉಭಯ ರಾಷ್ಟ್ರಗಳ ನಡುವಿನ ಇಂಧನ ಸಹಕಾರವೂ ಬಲವಾಗಿದೆ ಎಂದು ರಷ್ಯಾದ ಅಧಿಕಾರಿ ತಿಳಿಸಿದ್ದಾರೆ.

ಉಕ್ರೇನ್ ಸಂಘರ್ಷವೂ ಚರ್ಚೆ

ಮೋದಿ ಮತ್ತು ಪುಟಿನ್ ಅವರು ಕಳೆದ ವಾರ ಬಿಷ್ಕೆಕ್‌ನಲ್ಲಿ ನಡೆದ ಎಸ್‌ಸಿಒ ಶೃಂಗಸಭೆಯ ಸಂದರ್ಭದಲ್ಲಿ ಭೇಟಿಯಾಗಿದ್ದರು. ಆಗ ಪ್ರಧಾನಿ ಮೋದಿ ಅವರು ಸಂಘರ್ಷವನ್ನು ತಕ್ಷಣವೇ ಅಂತ್ಯಗೊಳಿಸುವಂತೆ ಕರೆ ನೀಡಿದ್ದರು. ಅಂತ್ಯವಿಲ್ಲದ ಯುದ್ಧದ ಹಾದಿಯಿಂದ ಸಂಘರ್ಷದ ಅಂತ್ಯದತ್ತ ಸಾಗುವಂತೆ ರಷ್ಯಾ ನಾಯಕನಿಗೆ ಮನವಿ ಮಾಡಿದ್ದರು. ಮುಂದಿನ ಮಾತುಕತೆಯಲ್ಲೂ ಉಕ್ರೇನ್ ಸಂಘರ್ಷ ಹಾಗೂ ಶಾಂತಿಯತ್ತ ಸಾಗುವ ಮಾರ್ಗಸೂಚಿ ಪ್ರಮುಖವಾಗಿ ಚರ್ಚೆಯಾಗುವ ನಿರೀಕ್ಷೆಯಿದೆ. ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳಲು ಅಮೆರಿಕದ ಟ್ರಂಪ್ ಆಡಳಿತ ಸೇರಿದಂತೆ ಹಲವು ದೇಶಗಳು ಇತ್ತೀಚಿನ ದಿನಗಳಲ್ಲಿ ಹೊಸ ಪ್ರಯತ್ನಗಳನ್ನು ನಡೆಸಿವೆ.

1ನೇ ಪುಟದಿಂದ....

ರೈತರಿಗೆ ಬೆಳೆ ವಿಮೆ ಸೌಲಭ್ಯ ಒದಗಿಸಲು ನಡೆಸಿದ ಬೆಳೆ ಕಟಾವು ಪ್ರಯೋಗದ ವರದಿ ಮಾಡುವಾಗ ಅಧಿಕಾರಿಗಳು ಸಮಯಕ್ಕೆ ಬೆಳೆ ಕಟಾವು ಪ್ರಯೋಗ ಮಾಡಬೇಕು. ತಂತ್ರಾಂಶದಲ್ಲಿ ಅಂಕಿ ಅಂಶಗಳು ತಪ್ಪಾಗದಂತೆ ಪ್ರಯೋಗದ ವಿವರಗಳನ್ನು ಭರ್ತಿ ಮಾಡಬೇಕು. ಜಿಲ್ಲೆಯಲ್ಲಿರುವ ಎಲ್ಲಾ ಸಣ್ಣ ನೀರಾವರಿ ಹಾಗೂ ನೀರಿನಾಸರೆಗಳ ಗಣತಿಯನ್ನು ಸಮರ್ಪಕವಾಗಿ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಅವರು, ಜಿಲ್ಲಾ ಮಟ್ಟದಲ್ಲಿ ಗಣತಿ ಕಾರ್ಯ ಮಾಡುವ ಮೇಲ್ವಿಚಾಕರಿಗೆ ಮತ್ತು ತಾಲ್ಲೂಕು ಮಟ್ಟದಲ್ಲಿ ಗಣತಿ ಕಾರ್ಯ ಕೈಗೊಳ್ಳುವ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರು ಗಣತಿ ಕಾರ್ಯ ವಿಧಾನದ ಕು-ರಿತು ಸೂಕ್ತ ತರಬೇತಿ ಹೊಂದಬೇಕು ಎಂದು ತಿಳಿಸಿದರು. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಆರ್.ಎಚ್.ನದಾಫ್ ಮಾತನಾಡಿ, 2025 ರ ಜನವರಿಯಿಂದ ಡಿಸೆಂಬರ್ ವರೆಗೆ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 9,235 ಹಾಗೂ ನಗರ ಪ್ರದೇಶಗಳಲ್ಲಿ 25,060 ಸೇರಿದಂತೆ ಒಟ್ಟು 34,295 ಜನನ ಘಟನೆಗಳು, ಗ್ರಾಮೀಣ ಪ್ರದೇಶದಲ್ಲಿ 7,842 ಹಾಗೂ ನಗರ ಪ್ರದೇಶದಲ್ಲಿ 3,769 ಸೇರಿದಂತೆ ಒಟ್ಟು 11,611 ಮರಣ ಘಟನೆಗಳು ನೋಂದಣಿಯಾಗಿವೆ. 2026 ರ ಜನವರಿಯಿಂದ ಆಗಸ್ಟ್ ವರೆಗೆ ಗ್ರಾಮೀಣ ಪ್ರದೇಶದಲ್ಲಿ 5,332 ಹಾಗೂ ನಗರ ಪ್ರದೇಶದಲ್ಲಿ 15,949 ಸೇರಿದಂತೆ ಒಟ್ಟು 21,281 ಜನನ ಘಟನೆಗಳು ಮತ್ತು ಗ್ರಾಮೀಣ ಪ್ರದೇಶದಲ್ಲಿ 4,794 ಹಾಗೂ ನಗರ ಪ್ರದೇಶದಲ್ಲಿ 2,383 ಸೇರಿದಂತೆ ಒಟ್ಟು 7,177 ಮರಣ ಘಟನೆಗಳು ನೋಂದಣಿಯಾಗಿವೆ. ಯಾವುದೇ ನಿರ್ಜೀವ ಜನನ ಘಟನೆ ನೋಂದಣಿಯಾಗಿಲ್ಲ. ಅದರಂತೆ ಜಿಲ್ಲೆಯಲ್ಲಿ 2026 ರ ಜನವ-ರಿಯಿಂದ ಆಗಸ್ಟ್ ವರೆಗೆ ಜನನ ಘಟನೆಗಳ ನೋಂದಣಿಯಲ್ಲಿ 21 ದಿವಸಗಳೊಳಗೆ 9,550, 21 ರಿಂದ 30 ದಿನಗಳೊಳಗೆ 1,899 ಹಾಗೂ 30 ದಿನಗಳಿಂದ 365 ದಿನಗಳೊಳಗೆ 5,137 ಜನನ ಘಟನೆಗಳು ನೋಂದಣಿಯಾಗಿವೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕರಾದ ಜೆ.ಡಿ. ಕೃಷ್ಣಮೂರ್ತಿ, ತೋಟಗಾರಿಕೆ ಜಂಟಿ ನಿರ್ದೇಶಕ ಕೃಷ್ಣ ಉಕ್ಕುಂದ, ಸಹಾಯಕ ಸಾಂಖ್ಯಿಕ ಅಧಿಕಾರಿ ಕಾಮಾಕ್ಷಿ, ಸಹಾಯಕ ನಿರ್ದೇಶಕ ಅಮರೇಶ ಎಸ್., ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಬರ ಘೋಷಣೆಗೆ ಆಗ್ರಹ: ಇಂದು ಮುದ್ದೇಬಿಹಾಳ ಬಂದ್‌ಗೆ ಕರೆ

ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಸಮಗ್ರ ವಿಜಯಪುರ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಬೇಕು ಎಂದು ಆಗ್ರಹಿಸಿ ಮಾಜಿ ಶಾಸಕ ಹಾಗೂ ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ನೇತೃತ್ವದಲ್ಲಿ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಐದನೇ ದಿನಕ್ಕೆ ಕಾಲಿಟ್ಟಿದೆ. ಇದರ ಭಾಗವಾಗಿ ಸೆಪ್ಟೆಂಬರ್ 12ರಂದು ಶನಿವಾರ ಮುದ್ದೇಬಿಹಾಳ ಪಟ್ಟಣ ಬಂದ್‌ಗೆ ಕರೆ ನೀಡಲಾಗಿದೆ.**

ಈ ಕುರಿತು ಶುಕ್ರವಾರ ಧರಣಿ ಸ್ಥಳದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಎ.ಎಸ್. ಪಾಟೀಲ ನಡಹಳ್ಳಿ ಮಾತನಾಡಿ, ಸೆಪ್ಟೆಂಬರ್ 8ರಂದು ಪಟ್ಟಣದ ಬಜಾರ್ ಹನುಮಾನ್ ಮಂದಿರದಲ್ಲಿ ವರ್ತಕರು ಹಾಗೂ ವ್ಯಾಪಾರಸ್ಥರ



ಸಭೆ ನಡೆಸಿ ಬಂದ್‌ಗೆ ತೀರ್ಮಾನಿಸಲಾಗಿದೆ. ಪಟ್ಟಣದ ವ್ಯಾಪಾರಸ್ಥರು ಬಂದ್‌ಗೆ ಬೆಂಬಲ ನೀಡಿದ್ದಾರೆ ಎಂದು ಹೇಳಿದರು. ಸೆ.12ರಂದು ಬೆಳಗ್ಗೆಯಿಂದ ಸಂಜೆ 6ರವರೆಗೆ ಪಟ್ಟಣ ಬಂದ್ ಇರಲಿದೆ. ಔಷಧಿ ಮತ್ತು ಹಾಲಿನ ಅಂಗಡಿಗಳಿಗೆ ಮಾತ್ರ ವಿನಾಯಿತಿ ನೀಡಲಾಗಿದ್ದು, ಉಳಿದ ಅಂಗಡಿ-ಮುಂಗಟ್ಟುಗಳನ್ನು ಬಂದ್ ಮಾಡುವಂತೆ ಮನವಿ ಮಾಡಲಾಗಿದೆ.

ಸಾರಿಗೆ ಘಟಕದ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಗಿದ್ದು, ಶನಿವಾರ ಬಸ್‌ಗಳು ಸಂಚರಿಸದಂತೆ ಸಹಕರಿಸುವಂತೆ ಕೋರಲಾಗಿದೆ. ಆಟೋ, ಕ್ರೂಸರ್ ಸೇರಿದಂತೆ ಖಾಸಗಿ ವಾಹನಗಳ ಮಾಲೀಕರು ಕೂಡ ವಾಹನಗಳನ್ನು ರಸ್ತೆಗಿಳಿಸದೆ ರೈತರ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ನಡಹಳ್ಳಿ ಮನವಿ ಮಾಡಿದರು. ಸೆ.12ರಂದು ಹಳೆಯ ತಹಶೀಲ್ದಾರ್ ಕಚೇರಿ ಆವರಣದ ಸೈನಿಕ ಮೈದಾನದಲ್ಲಿ ಧರಣಿ ಸತ್ಯಾಗ್ರಹ ಮುಂದುವರಿಯಲಿದೆ. ಈ ಹೋರಾಟದಲ್ಲಿ ಯಾವುದೇ ಪಕ್ಷದ ಧ್ವಜ ಅಥವಾ ಚಿಹ್ನೆ ಇರುವುದಿಲ್ಲ. ಪಟ್ಟಣದ ನಾಗರಿಕರು ಹಾಗೂ ವ್ಯಾಪಾರಸ್ಥರು ಪಕ್ಷಾತೀತವಾಗಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ಸಮಗ್ರ ವಿಜಯಪುರ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಿ ರೈತ-ರಿಗೆ ನ್ಯಾಯ ಒದಗಿಸಬೇಕು. ರೈತರ ಹಿತಕ್ಕಾಗಿ ಎಲ್ಲರೂ ಬಂದ್‌ಗೆ ಬೆಂಬಲ ನೀಡಬೇಕು ಎಂದು ನಡಹಳ್ಳಿ ಕರೆ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಜಗದೀಶ್ ಪಂಪಣ್ಣನವರ, ಕೆಂಚಪ್ಪ ಬಿರಾದಾರ, ಲಕ್ಷ್ಮಣ ಬಿಜ್ಜೂರ, ಗಿರೀಶಗೌಡ ಪಾಟೀಲ ಮುರಾಳ, ಚೇತನ ಸಂಗಮ, ಸಂಗಮ್ಮ ದೇವರಳ್ಳಿ, ಗೌರಮ್ಮ ಹುನುಗುಂದ, ಬಸಯ್ಯ ನಂದಿಕೇಶ್ವಮಠ, ನಾಗೇಶ ಕವಡಿಮಟ್ಟಿ, ಹಾಗೂ ಶೇಖರ ಆಲೂರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಯಲಬುರ್ಗಾದಲ್ಲಿ ಜಿಲ್ಲಾ ಮಟ್ಟದ ಪತ್ರಿಕಾ ದಿನಾಚರಣೆ ಆಮಂತ್ರಣ ಪತ್ರಿಕೆ ಬಿಡುಗಡೆ

ಅ.ಶ. ಸುದ್ದಿ ಕನಕಗಿರಿ

**ಯಲಬುರ್ಗಾ: ಪಟ್ಟಣದ ಬುದ್ಧ ಬಸವ ಅಂಬೇಡ್ಕರ್ ಭವನದಲ್ಲಿ ಸೆ.25ರಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಹಾಗೂ ತಾಲೂಕು ಘಟಕಗಳ ವತಿಯಿಂದ ನಡೆಯಲಿರುವ ಜಿಲ್ಲಾ ಮಟ್ಟದ ಪತ್ರಕರ್ತರ ಸಮಾವೇಶ, ಪತ್ರಿಕಾ ದಿನಾಚರಣೆ ಹಾಗೂ KUWJ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭದ ಅಂಗವಾಗಿ ಪೂರ್ವಭಾವಿ ಸಭೆ ನಡೆಸಲಾಯಿತು.**

ಪಟ್ಟಣದ ಏಗಘಾಎ ಕಚೇರಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಹನಮಂತ ಹಳ್ಳಿಕೇರಿ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೈ. ನಾಗರಾಜ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಾರ್ಯಕ್ರಮದ ಕರಪತ್ರ ಹಾಗೂ ಆಮಂತ್ರಣ




ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಪದಾಧಿಕಾರಿಗಳು, ಸಮಾರಂಭಕ್ಕೆ ಜಿಲ್ಲೆಯ ಸಚಿವರು, ಶಾಸಕರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರು ಸೇರಿದಂತೆ ವಿವಿಧ ಗಣ್ಯರು ಭಾಗವಹಿಸಲಿದ್ದಾರೆ. ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಂಘದ ಎಲ್ಲ ಪದಾಧಿಕಾರಿಗಳು ಹಾಗೂ ಸದಸ್ಯರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ KUWJ ತಾಲೂಕಾಧ್ಯಕ್ಷ ಮಲ್ಲು ಮಾಟರಂಗಿ, ಪ್ರಧಾನ ಕಾರ್ಯದರ್ಶಿ ಸಂತೋಷ ಬಂಡ್ರಿ, ಗೌರವಾಧ್ಯಕ್ಷ ಇಮಾಮಸಾಬ ಸಂಕನೂರು, ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾದ ಸಿದ್ದು ಹಿರೇಮಠ, ಮಹಾಂತೇಶ ಛಲವಾದಿ, ಶರಣು ಗಮಗೇರಿ, ಉಪಾಧ್ಯಕ್ಷ ಚಂದ್ರಶೇಖರ ಮರದಡ್ಡಿ, ಪದಾಧಿಕಾರಿಗಳಾದ ದೊಡ್ಡಬಸಪ್ಪ ಹಕಾರಿ, ಬಾಳನಗೌಡ, ಶ್ರೀಧರ, ದೇವೇಂದ್ರಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

‘ವಚನಾಮೃತ’

ಅತಿಮೋಹ ಅತಿಮಾತು
ಹಿತ ಕೆಡುವುದರೊಳ್ ಗತ
ನೆನಪಿಸುವುದಯ್ಯ ಜೊತೆಗಿಡದೆ ಬಂಧ.
ಗತಿಸಿದ ನೆನಪಿಸಿ ಶೋಕವಂ
ಪಡುವುದ ಬಿಸುಟ್ಟು
ಹಿತಮಿತವಾಗಿರುವುದುಚಿತ
ಸತ್ಯವಾಣಿ!!.



ವಾಣಿ ಭಂಡಾರಿ.

# ಶ್ರಾವಣ ಮಾಸದ ಪ್ರಯುಕ್ತ ಶ್ರೀ ಗಜಲಕ್ಷ್ಮಿ ದೇವಿಗೆ ವಿಶೇಷ ಪೂಜೆ ಹಾಗೂ ಅನ್ನ ಸಂತರ್ಪಣೆ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ ಪಟ್ಟಣದ: ಸೆ.11 ಶ್ರಾವಣ ಮಾಸದ ಶುಕ್ರವಾರದಂದು ಶ್ರೀ ಗಜಲಕ್ಷ್ಮಿ ದೇವಿಯ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆಯನ್ನು ಭಕ್ತಿಭಾವದಿಂದ ಹಮ್ಮಿಕೊಳ್ಳಲಾಯಿತು.**

**ಈ ಸಂದರ್ಭದಲ್ಲಿ ಶ್ರೀ ಗಜಲಕ್ಷ್ಮಿ ದೇವಿಗೆ ವಿಶೇಷ ಪೂಜೆ, ಅಭಿಷೇಕ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿ, ದೇವಿಗೆ ವಿಶೇಷ ನೈವೇದ್ಯ ಸಮರ್ಪಿಸಲಾಯಿತು.**

ನಂತರ ಭಕ್ತಾದಿಗಳಿಗೆ ಸಿಹಿ ಪಾಯಸ ಸೇರಿದಂತೆ ಅನ್ನ ಸಂತರ್ಪಣೆ





ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ದೇವಸ್ಥಾನದ ಕಮಿಟಿಯವರು, ಅರ್ಚಕರು, ಗಣ್ಯರು ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಿ ದೇವಿಯ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.

ಶ್ರಾವಣ ಮಾಸದ ಪ್ರಯುಕ್ತ ನಡೆದ ಈ ಧಾರ್ಮಿಕ ಕಾರ್ಯಕ್ರಮವು ಭಕ್ತರಲ್ಲಿ ಆಧ್ಯಾತ್ಮಿಕ ಭಾವನೆ ಮೂಡಿಸುವುದರೊಂದಿಗೆ, ಎಲ್ಲರಿಗೂ ಸುಖ, ಶಾಂತಿ, ಸಮೃದ್ಧಿ ಹಾಗೂ ಆರೋಗ್ಯ ಕರುಣಿಸಲಿ ಎಂದು ಶ್ರೀ ಗಜಲಕ್ಷ್ಮಿ ದೇವಿಯಲ್ಲಿ ಪ್ರಾರ್ಥಿಸಲಾಯಿತು.

# ಇಡಿ ದಾಳಿ ರಾಜಕೀಯ ಪ್ರೇರಿತ ಎಂಬ ಆರೋಪ; ತನಿಖೆಯ ಸತ್ಯಾಂಶ ಹೊರಬರಲಿ: ರಮೇಶ ನಾಯಕ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಸಚಿವ ಸತೀಶ್ ಜಾರಕಿಹೊಳಿ ಅವರ ಮೇಲಿನ ಜಾರಿ ನಿರ್ದೇಶನಾಲಯದ (ಇಡಿ) ಕ್ರಮ ರಾಜಕೀಯ ಪ್ರೇರಿತವಾಗಿದೆ ಎಂಬ ಆರೋಪ ಕೇಳಿಬಂದಿದೆ. ಅಹಿಂದ ನಾಯಕನೊಬ್ಬರ ರಾಜ-ಕೀಯ ಬೆಳವಣಿಗೆಯನ್ನು ಕುಂಠಿತಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ತನಿಖಾ ಸಂಸ್ಥೆಯನ್ನು ಬಳಸಿಕೊಳ್ಳುತ್ತಿದೆ ಎಂದು ಕನಕಗಿರಿ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ರಮೇಶ ನಾಯಕ ಹುಲಿಹೈದರ ಆರೋಪಿಸಿದ್ದಾರೆ.**

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, 2028ರ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಪ್ರಭಾವಿ ನಾಯಕರನ್ನು ಗುರಿಯಾಗಿಸಲಾಗುತ್ತಿದೆ ಎಂಬ ಅನುಮಾನ ರಾಜ-ಕೀಯ ವಲಯದಲ್ಲಿ ಮೂಡಿದೆ ಎಂದು ಹೇಳಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಅಹಿಂದ ವರ್ಗದ ಪ್ರಭಾವಿ ನಾಯಕರಾಗಿರುವ ಹಿನ್ನೆಲೆಯಲ್ಲಿ ಅವರನ್ನು ರಾಜ-ಕೀಯವಾಗಿ ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂಬುದು ತಮ್ಮ ಅಭಿಪ್ರಾಯವಾಗಿದೆ ಎಂದು ತಿಳಿಸಿದ್ದಾರೆ.



ವಿದೇಶಗಳಲ್ಲಿ ಹಾಗೂ ದೇಶದ ವಿವಿಧೆಡೆ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡಿರುವ ಅನೇಕರು ಇದ್ದರೂ, ಅವರ ವಿರುದ್ಧ ಇದೇ ರೀತಿಯ ಕ್ರಮ ಏಕೆ ಕೈಗೊಳ್ಳಲಾಗುತ್ತಿಲ್ಲ? ಸತೀಶ್ ಜಾರಕಿಹೊಳಿ ಅವರನ್ನು ಮಾತ್ರ ಗುರಿಯಾಗಿಸಿರುವುದೇಕೆ? ಎಂಬ ಪ್ರಶ್ನೆಗಳನ್ನು ರಮೇಶ ನಾಯಕ ಎತ್ತಿದ್ದಾರೆ.

ತನಿಖೆಯ ಸತ್ಯಾಂಶ ಬಹಿರಂಗವಾಗಲಿ

ಆದಾಗ್ಯೂ, ಇಡಿ ಕೈಗೊಂಡಿರುವ ಕ್ರಮದ ನಿಖರ ಕಾರಣಗಳು, ತನಿಖೆಯ ವ್ಯಾಪ್ತಿ ಹಾಗೂ ಅದರ ಹಿಂದಿರುವ ಸತ್ಯಾಂಶಗಳು ತನಿಖೆ ಪೂರ್ಣಗೊಂಡ ಬಳಿಕವೇ ಸ್ಪಷ್ಟವಾಗಬೇಕಿದೆ. ರಾಜಕೀಯ ಪ್ರೇ-ರಿತ ಎಂಬುದು ಕಾಂಗ್ರೆಸ್ ಮುಖಂಡರ ಆರೋಪವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅಥವಾ ಇಡಿ ಅಧಿಕಾರಿಗಳ ಅಧಿಕೃತ ಪ್ರತಿಕ್ರಿಯೆ ಹಾಗೂ ತನಿಖೆಯ ಅಂತಿಮ ವರದಿ ಬಂದ ಬಳಿಕವಷ್ಟೇ ವಾಸ್ತವ ಸ್ಥಿತಿ ಸ್ಪಷ್ಟವಾಗಲಿದೆ. ತನಿಖಾ ಸಂಸ್ಥೆಗಳ ಕ್ರಮಗಳು ಕಾನೂನುಬದ್ಧ ಪ್ರಕ್ರಿಯೆಯ ಭಾಗವಾಗಿದ್ದರೆ, ಅದನ್ನು ರಾಜಕೀಯ ಬಣ್ಣ ನೀಡಬಾರದು ಎಂಬ ಅಭಿಪ್ರಾಯವೂ ಇದೆ.

ಅದೇ ವೇಳೆ, ತನಿಖಾ ಸಂಸ್ಥೆಗಳನ್ನು ರಾಜಕೀಯ ಉದ್ದೇಶಕ್ಕೆ ಬಳಸಲಾಗುತ್ತಿದೆ ಎಂಬ ಆರೋಪಗಳಿದ್ದರೆ, ಅವುಗಳ ಬಗ್ಗೆಯೂ ಪಾರದರ್ಶಕತೆ ಅಗತ್ಯ ಎಂಬುದು ಕಾಂಗ್ರೆಸ್ ಮುಖಂಡರ ನಿಲುವಾಗಿದೆ.

‘ದ್ವೇಷ ರಾಜಕಾರಣ ಮುಂದುವರಿದರೆ ಹೋರಾಟ’

ಅಹಿಂದ ನಾಯಕರು ಹಾಗೂ ಕಾಂಗ್ರೆಸ್‌ನ ನಿಷ್ಠಾವಂತ ಸಚಿವರನ್ನು ರಾಜಕೀಯವಾಗಿ ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ ಎಂಬ ಆರೋಪವನ್ನು ರಮೇಶ ನಾಯಕ ಮಾಡಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧದ ಈ ಆರೋಪಗಳಿಗೆ ಸೂಕ್ತ ಸ್ಪಷ್ಟನೆ ದೊರೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಇಂತಹ ಕ್ರಮಗಳು ಮುಂದುವರಿದರೆ ರಾಜ್ಯಾದ್ಯಂತ ಜನಪರ ಹೋರಾಟ ರೂಪಿಸುವುದಾಗಿ ಅವರು ಎಚ್ಚರಿಸಿದ್ದಾರೆ. ಸತೀಶ್ ಜಾರಕಿಹೊಳಿ ಅವರ ಮೇಲಿನ ಕ್ರಮದ ವಿಚಾರದಲ್ಲಿ ಅಂತಿಮವಾಗಿ ತನಿಖೆಯ ಸತ್ಯಾಂಶವೇ ಮುಖ್ಯವಾಗಿದ್ದು, ಜನರೂ ಅದನ್ನು ಗಮನಿಸುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಮತದಾರರು ತಮ್ಮ ತೀರ್ಪಿನ ಮೂಲಕ ರಾಜಕೀಯ ಉತ್ತರ ನೀಡಲಿದ್ದಾರೆ ಎಂದು ರಮೇಶ ನಾಯಕ ಹುಲಿಹೈದರ ತಿಳಿಸಿದ್ದಾರೆ

# ನಿಜಶಕ್ತಿ



ತರವಲ್ಲ ಬರಿ ಮಾತು ತಂಪಿ ರದ ಮಲರಂತೆ;
ಬಂದೀತೆ ನಿಜ ಶಕ್ತಿ ಬರಡು ಮಾತಿಂದ?
ತೂಕವಿಲ್ಲದ ವಾಣಿ ಕಳೆಯುಳಿದ ಹೊಲದಂತೆ!
ಮೌನ ಬಾಳಿನ ಆಸ್ತಿ
ಮುದ್ದುರಾಮ...

ಮಾನವನ ನಿಜಶಕ್ತಿ ಅಂತರ್ಯದರಿವಿನಲ್ಲಿದೆ. ಹಲವಾರು ಬಾರಿ ನಮ್ಮ ವಾಣಿ ನಮ್ಮನ್ನು ಪ್ರತಿನಿಧಿಸುತ್ತದೆ. ನಮ್ಮ ವಾಕ್ಯಗಳು ಆಂತರ್ಯದ ಅಭಿವ್ಯಕ್ತಿಯಾಗಿರಬೇಕು ಪ್ರಚೋದನೆಯಲ್ಲಿ ಸಿಲುಕಿದ ಅಪಹಾಸ್ಯವಾಗಬಾರದು. ವಿವೇಕ ಶೂನ್ಯನಾದವನ ಉಕ್ತಿಗಳು ಅಪಹಾಸ್ಯಕ್ಕಡೆಯಾಗುತ್ತವೆ. ಮೌನದಲ್ಲಿ ಅಡಕವಾದ ಅಭಿವ್ಯಕ್ತಿ ನಮ್ಮತನಕ್ಕೆ ಅನ್ವರ್ಥ ವಾಗಬೇಕು. ಅವಸರದಲ್ಲಿ ಆಡಿದ ಮಾತುಗಳು ತೂಕಕ್ಕೆ ಬರಲಾರವು. ಆಪಕ್ವತೆಯು ನಮ್ಮ ಉಕ್ತಿಗಳಲ್ಲಿ ಎದ್ದು ತೋರುತ್ತದೆ ಹೀಗಾಗಿ ಸಂತರು ಜ್ಞಾನಿಗಳ ಮುಖದಿಂದ ಹೊರಟವಾಣಿಗಳಿಗೆ ತುಂಬಾ ಪ್ರಾಮುಖ್ಯತೆ ಇರುತ್ತದೆ.

ನಮ್ಮೊಳಗಿನ ಸತತ ಸಂವಹನಕ್ಕೆ ಯಾವ ಅಡೆತಡೆಗಳಿರುವುದಿಲ್ಲ ಅದೊಂದು ನಿತ್ಯ ನಿರ್ಮಲ ನೀರಿನಂತೆ ಪ್ರವಹಿಸುತ್ತದೆ. ಮತ್ತು ಅದು ಅಪರಿಭಿನ್ನತೆಯ ನಿಲುವಾಗಿರುತ್ತದೆ. ಸಂಯಮ ಮೀರಿದ ನಡತೆ ವಾಕ್ಯಗಳು ಅಪಸೌಖ್ಯವನ್ನು ಕೊಡುತ್ತವೆ. ಚಿಂತನೆಯಲ್ಲಿ ಮಾಗಿದ ನಡೆ-ನುಡಿಗಳು ಮುತ್ತಿನ ತೋರಣದಂತೆ ಶೋಭಾಯಮಾನವಾಗಿರುತ್ತವೆ. ಅದೇ ನಮ್ಮ ಬದುಕಿನ ಅಪೂರ್ವಾರ್ಥ ಲಬ್ಧಿ ಆಗಿರುತ್ತವೆ. ಪ್ರತಿಯೊಂದು ಕ್ರಿಯೆಗೆ ಪ್ರತಿಕ್ರಿಯೆ ನೀಡುವುದು ಅವಶ್ಯಕವೇ? ಕೆಲವೊಮ್ಮೆ ನಮ್ಮ ಮೌನ ಸಾವಿರ ಮಾತುಗಳಿಗೆ ಮೀರಿದ ಉತ್ತರ ನೀಡಬಹುದು. ಇದು ಮಾತಿಗಿಂತ ಮಿಗಿಲಾದ ಉತ್ತರವಾಗಿರುತ್ತದೆ.

ಸಾವಿರ ಜನರಿಗಿಂತ ಮೌನಿ ಭಿನ್ನವೆನಿಸಿಕೊಳ್ಳುತ್ತಾನೆ ಏಕೆಂದರೆ ಅವನ ಒಳಗಿನ ನಿಜ ಸತ್ಯ ಮೌನಸಂವಹನ ವಾಗಿರುತ್ತದೆ. ಗ್ರಹಿಕೆಯ ಮಾರ್ಗ ಮೌನವಾಗಿರುತ್ತದೆ. ಇದರಿಂದ ನಾವು ಏನನ್ನು ಕಳೆದುಕೊಳ್ಳುವುದಿಲ್ಲ ಗ್ರಹಿಕೆಯಿಂದ ಸಂಯಮ, ತಾಳ್ಮೆ, ಸದ್ವಿವೇಕ ವೃದ್ಧಿಸುತ್ತದೆ.

ನಮ್ಮ ಅಪೂರ್ವ ಬಲವಾಗಿ ಅಪ್ರತಿಮರೂಪವಾಗಿ ಮೌನ ಗುರುತಿಸಿಕೊಳ್ಳುತ್ತದೆ. ಹರಿಯುವ ನದಿಯ ಆಳ ಮೌನವಾಗಿರುತ್ತದೆ. ಅಂತೆಯೇ ಪ್ರವೇಕನಾದವನ ಅಂತರ್ಯ ಏಕಾಂತ ಗೀತೆಯಂತೆ ಸುಶ್ರಾವ್ಯ ವಾಗಿರುತ್ತದೆ. ಅನಗತ್ಯ ವಾಣಿಗಳಿಗೆ ಅಲ್ಲಿ ಅವಕಾಶಗಳಿರುವುದಿಲ್ಲ. ಚಿಂತನೆಯ ಸದೃಶ ರೂಪ ಮೌನವಾಗಿದ್ದು ಕಡುವೈರಿಯನ್ನು ಮೌನದ ಪ್ರಹಾರದಿಂದ ಸೋಲಿಸಬಹುದಾಗಿದೆ. ಮೌನ ನೀಡುವ ವಿವರಣೆ ಅಪ್ರಮತ್ತತೆಯಿಂದ ಕೂಡಿರುತ್ತದೆ.

ನಮ್ಮ ವ್ಯಕ್ತಿತ್ವದ ಅಭಿವರ್ಧನೆಗೆ ಅನುಭಾವದಲಿ ಮಾಗಿದ ದೃಷ್ಟಿ ಬೇಕು. ಅದು ಮೌನಿಯಾಗಿದ್ದಾಗ ಮಾತ್ರ ಸಾಧ್ಯ. ಎಲ್ಲರ ಅಭಿಮತಕ್ಕಾಗಿ ತಡವರಿಸಿ ಉತ್ತರಿಸಿ, ಪ್ರತಿಕ್ರಿಯಿ ಸುವುದರ ಬದಲಾಗಿ ಅಭೀತಮನದವರಾಗಿ ಅಭಿಮತ ಕೇಳಿದಾಗ ಉತ್ತ-ರಿಸಿದವನೇ ಮಾನ್ಯನಾಗುತ್ತಾನೆ.
ನಮ್ಮ ನಿಜಗಳಿಕೆ ಮೌನದಲ್ಲಿರುತ್ತದೆ.
ಅದು ಹಣಕ್ಕಿಂತ ಮಿಗಿಲಾಗಿರುತ್ತದೆ ಮಾತುಗಳ ಮಿತವ್ಯಯದಲ್ಲಿ ಬಳಸಿದಾಗ ಪರಿಪೂರ್ಣರಾಗುತ್ತೇವೆ.

ಮಾತು ,ಮೌನದ ನಡುವಿರುವ ಅಂತರ ಸೂಕ್ಷ್ಮವಾಗಿರುತ್ತದೆ. ಮಾತನ್ನು ಬಳಸುವ ಮುನ್ನ ಅದರ ಪ್ರತಿಧ್ವನಿಸುವಿಕೆಯ ಅರಿವು ನಮಗಿರಬೇಕು. ಮಾತು ಹತೋಟಿಯಲ್ಲಿರಬೇಕು. ಅಪ ಶಬ್ದಗಳು ಮಾರ್ಧನಿಸುತ್ತವೆ ಅರಿವಿನಲ್ಲಿ ಮಾಗಿದ ಮೌನ ನಮ್ಮ ಬಲ ,ನಮ್ಮ ಅಶಕ್ತತೆಯಲ್ಲ. ಮೌನ ನಮ್ಮ ಅನುಪಸ್ಥಿತಿಯಲ್ಲ ಬದುಕಿನ ಪ್ರತಿಯೊಂದು ಪ್ರತಿಫಲನಕ್ಕೆ ಮೌನ ಸಾಕ್ಷಿಯಾಗಿರುತ್ತದೆ. ನಮ್ಮ ಪರಿಪೂರ್ಣತ್ವದ ಅರ್ಥ ಸ್ಪಷ್ಟತೆಗೆ ಮೌನ ಅರ್ಥಾನುರೂಪವಾಗಿರುತ್ತದೆ. ಹೀಗಾಗಿ ಮೌನದ ಮಹತ್ವವನ್ನ ಅರಿತು ಬಾಳೋಣ ಅಲ್ಲವೇ?..



ಆರತಿ ಏನ್ ರಾವ್

## ಪುಟಿದೇಳುವ

ಮತ್ತೆ ಮತ್ತೆ ಪುಟಿದೇಳುವ
ಗತ್ತು ಮತ್ತಿಗೆ ವಿರಮಿಸಿ
ಸೋಲು ಗೆಲವು ಮತ್ತೆರದಂತೆ.

ಸುತ್ತಿಗೆ ಬಡಿತಕೆ ಮೆತ್ತಗಾಗದೇ
ಭಿತ್ತಿ ಪತ್ರದಿ ಮೂಡಿಬರುವೆ
ಹೊಸ ತನದ ದಿಗಂತದಂತೆ.

ಮುತ್ತಿನ ಸವಿಗೆ
ವಿಪತ್ತನು ಜಯಿಸಿ
ಅಪತ್ತಿನ ಮೇರೆ ಮೀರುವಂತೆ.

ಚಪಲ ಚಂಚಲ ಕಡೆಗಣಿಸಿ
ಧೃಢತೆಯ ಮೈಗೂಡಿಸಿ
ಸಮಭಾವ ಸವಿ ಲಹರಿ ಹಾಡುವಂತೆ

ಕಾಲದ ಜೊತೆಯಲಿ
ಅಂಧಕಾರ ಕಳೆಯುತ
ಜ್ಞಾನ ಕಣಜದಿ ಮಿಂದೇಳುವಂತೆ.

ಬಿದ್ದ ಜಾಗದಿ ಎದ್ದು
ಜಿದ್ದಾ ಜಿದ್ದಿನ ಕಣದಿ
ಮುದ್ದು ಮಾಡುವ ಸುದ್ದಿ ಜಾಹೀರಾತು ಆದಂತೆ.

ಸಹಿಷ್ಣುತೆಯ ಸಾಕಾರ
ಪ್ರಯತ್ನದ ಬೀಜ ಬಿತ್ತಿ
ಸಮರ್ಪಣಾ ಭಾವ ಲಹರಿ ಫಲ ಬಿಟ್ಟಂತೆ.



ರೇಷ್ಮಾ ಕಂದಕೂರ

## ಜೀವನ

ಜೀವನವೆಂಬುದು ಒಂದು ಸುಂದರ ಪಯಣ,
ಪ್ರತಿ ಹೆಜ್ಜೆಯಲ್ಲೂ ಹೊಸತೊಂದು ಪಾಠ.
ಸೋಲು ಬಂದರೂ ಕುಗ್ಗಬಾರದು ಮನ,
ಗೆಲುವು ಬಂದರೂ ಮರೆಯಬಾರದು ವಿನಯ.
ಕಣ್ಣೀರಿನ ಹಿಂದೆ ನಗುವಿದೆ,
ಕತ್ತಲೆಯ ಹಿಂದೆ ಬೆಳಕಿದೆ.
ಬಿದ್ದಾಗ ಮತ್ತೆ ಏಳುವುದೇ ಧೈರ್ಯ,
ಕಷ್ಟದಲ್ಲೂ ಕನಸು ಕಾಣುವುದೇ ಜೀವನ.
ನಿನ್ನೆ ಕಳೆದ ಕಥೆಯಾದರೆ,
ಇಂದು ನಮ್ಮ ಕೈಯಲ್ಲಿರುವ ಅವಕಾಶ.

# ಸೌಂದರ್ಯ ಸ್ಪರ್ಧೆಯು... ಬದುಕಿನ ಪದರ ಎಂಬ ಗೌನು



ಸಾಮಾನ್ಯವಾಗಿ ಬ್ಯೂಟಿ ಪೇಜಂಟ್ಗಳಲ್ಲಿ ಭಾಗವಹಿಸುವ ಸುಂದರಿಯರು ಧರಿಸುವ ದಿರಿಸಿಗೆ ಅವರ ಸೌಂದರ್ಯವನ್ನು ಎತ್ತಿ ಹಿಡಿಯುವ ಆಕರ್ಷಕ ವ್ಯಕ್ತಿತ್ವವನ್ನು ತೋರುವ ಹಲವಾರು ವಿವಿಧ ಆಯಾಮಗಳು ಇರುತ್ತವೆ. ಆದರೆ ಅತ್ಯಂತ ಪ್ರತಿಷ್ಠಿತವಾದ ಸೌಂದರ್ಯ ಸ್ಪರ್ಧೆಯೊಂದರಲ್ಲಿ ಹಾಗೆ ಧ-ರಿಸುವ ದಿರಿಸನ್ನು ಅರ್ಥಪೂರ್ಣವಾಗಿ ತೋ-ರಿಸಲು ಸಾಧ್ಯವಾಗಿದ್ದು ಹೀಗೆ.
ಕಳೆದ ವಾರ ವಿಯೆಟ್ನಾಂನಲ್ಲಿ ನಡೆದ ಮಿಸ್ ವರ್ಲ್ಡ್ ಸೌಂದರ್ಯ ಸ್ಪರ್ಧೆಯಲ್ಲಿ ಉಗಾಂಡಾದ ಮಿಸ್ ವರ್ಲ್ಡ್ ಸ್ಪರ್ಧಿ ಟ್ರೇವಿಯ ಎಲ್ಲೇ ಮುಹೂಜಾ ಧರಿಸಿದ ಪೇಜಂಟ್ ಗೌನ್ ಬಹಳಷ್ಟು ಜನರ ಗಮನ ಸೆಳೆಯಿತು.

ಆಕೆ ಧರಿಸಿದ ಗೌನಿನಲ್ಲಿ ಏಳು ಪದರಗಳು ಇದ್ದು ಅದಕ್ಕೆ ಲೇಯರ್ಸ್ ಆಫ್ ಲೈಫ್ ಎಂದು ಕರೆಯಲಾಗಿತ್ತು. ಅತ್ಯಂತ ಸುಂದರವಾದ ವಿನ್ಯಾಸ ಹೊಂದಿದ ದಿರಿಸು ಎಂಬ ಪ್ರಶಂಸೆಗೆ ಆ ದಿರಿಸು ಪಾತ್ರವಾಯಿತು. ಬಟ್ಟೆ, ವರ್ಣ ಮತ್ತು ಬೆಳಕಿನ ಅದ್ಭುತ ಸಂಯೋಜನೆಯ ಈ ಗೌನ್ ಸಹಜವಾಗಿಯೇ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದರೆ ಅದು ಅಚ್ಚರಿ ಏನಲ್ಲ.
ಈ ಸುಂದರವಾದ ಪದರಗಳನ್ನು ಹೊಂದಿದ ಗೌನ್ ಹಿಂದೆ ಒಂದು ಅರ್ಥಪೂರ್ಣವಾದ ಕಥೆ ಇದೆ. ತಾಯಿಯ ಹೊಟ್ಟೆಯಿಂದ ಹೊರ ಬರುವ ಮಗು ಸಿ ಸೆಕ್ಷನ್ ಎಂದು ಕರೆಯಲ್ಪಡುವ ಸಿಜೇರಿಯನ್ ಚಿಕಿತ್ಸೆಯ ಮೂಲಕ ಆಕೆಯ ಹೊಟ್ಟೆಯ ಏಳು ಪದರಗಳನ್ನು ಸೀಳಿ ಇಲ್ಲವೇ ಕತ್ತರಿಸಲ್ಪಟ್ಟು ಈ ಲೋಕದಲ್ಲಿ ಕಾಲಿಡುತ್ತದೆ.

ಹಾಗೆ ಮಗು ಈ ಲೋಕಕ್ಕೆ ಕಾಲಿಡುವ ಪಯಣದ ಹಾದಿಯ ವಿವರಗಳನ್ನು ಹೆಣ್ಣು ಮಗಳ ಹೊಟ್ಟೆಯಿಂದ ಬಟ್ಟೆಯ ಗೌನಿನ ಮೂಲಕ ಇಲ್ಲಿ ತೋರಿಸಲಾಗಿತ್ತು.
ನಿಜವಾಗಿಯೂ ಇದೊಂದು ಸ್ಪೂರ್ತಿಯೇ ಸರಿ... ಜೊತೆಗೆ ಕ್ರಾಂತಿಕಾರಕ ಕೂಡ.
ಸಿಜೆರಿಯನ್ ಶಸ್ತ್ರಚಿಕಿತ್ಸೆಯು ಜಾಗತಿ-ಕವಾಗಿ ಅತ್ಯಂತ ಪ್ರಮುಖ ಶಸ್ತ್ರ ಚಿಕಿತ್ಸೆಗಳಲ್ಲಿ ಒಂದು. ಅಮೆರಿಕಾದ ಪ್ರತಿ ಮೂರು ಮಕ್ಕಳಲ್ಲಿ ಒಂದು ಮಗು ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೂಲಕವೇ ಜನಿಸುತ್ತದೆ.... ಆದರೂ ಕೂಡ ಈ ಶಸ್ತ್ರ ಚಿಕಿತ್ಸೆಯನ್ನು ಅತ್ಯಂತ ಕಡಿಮೆ ಪ್ರಶಂಶಿಸಲು ಕಾರಣ ಬಹುತೇಕ ಇದರ ಬಳಕೆಯ ದುರುಪಯೋಗ ಇರಬಹುದು. ಒಂದು ಮಗುವನ್ನು ಅನಾಯಾಸವಾಗಿ ಈ ಭೂಮಿಗೆ ತರಲು ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೊರೆ ಹೋಗುವ ವೈದ್ಯರು ಒಟ್ಟು ಏಳು ವಿವಿಧ ಪದರಗಳಲ್ಲಿ ಗರ್ಭಿಣಿಯರ ಹೊಟ್ಟೆಯನ್ನು ಸೀಳುತ್ತಾ ಹೋಗುತ್ತಾರೆ. ಮೊದಲ ಪದರ ಚರ್ಮ, ಎರಡನೆಯ ಪದರ ಕೊಬ್ಬು, ಮೂರನೆಯ ಪದರ ಸ್ನಾಯು ಮತ್ತು ಅಂಗಾಂಶಗಳನ್ನು ಜೋಡಿಸುವ ತಂತುಕೋಶ, ನಾಲ್ಕನೆಯ ಪದರ ಫಾಸಿಯ ಅಂದರೆ ಸ್ನಾಯುಗಳ ಹಂದರ ಮತ್ತು ಐದನೆಯ ಪದರ ಹೊಟ್ಟೆಯ ಭಾಗ,

ಆರನೆಯ ಪದರ ಗರ್ಭಕೋಶ ಹಾಗೂ ಅಂತಿಮವಾಗಿ ಗರ್ಭಕೋಶದಲ್ಲಿರುವ ಮಗುವನ್ನು ಸುತ್ತುವರೆದಿರುವ ನೀರಿನಿಂದ ಕೂಡಿದ ಗರ್ಭಚೀಲ
ಹೀಗೆ ಒಟ್ಟು ಏಳು ಪದರಗಳನ್ನು ಅತ್ಯಂತ ಸೂಕ್ಷ್ಮವಾಗಿ ಕತ್ತರಿಸುತ್ತಾ ಹೋಗುತ್ತಾರೆ....
ಇದೆಲ್ಲವೂ ಸ್ಥಾನೀಯ ಅರವಳಿಕೆಯನ್ನು ನೀಡಿರುವ ಗರ್ಭಿಣಿಯು ಎಚ್ಚರವಾಗಿರುವ ಜಾಗೃತ ಸ್ಥಿತಿಯಲ್ಲಿ ನಡೆಯುತ್ತಿರುತ್ತದೆ.
ಎಲ್ಲವನ್ನು ತನ್ನ ಅರೆ ಪ್ರಜ್ಞಾವಸ್ಥೆಯಲ್ಲಿ ಆಕೆ ಗಮನಿಸುತ್ತಿದ್ದು ತನ್ನ ಮಗುವಿನ ಅಳುವಿನ ಕರೆಗಾಗಿ ನಿರೀಕ್ಷಿಸುತ್ತಿರುತ್ತಾಳೆ.

ಮನುಷ್ಯ ಶರೀರವು ಮಾಡಿಸಿಕೊಳ್ಳಲೇಬೇಕಾದ ಶಸ್ತ್ರ ಚಿಕಿತ್ಸೆಗಳಲ್ಲಿ ತಮ್ಮ ಮಗುವನ್ನು ಅತ್ಯಂತ ಸುರಕ್ಷಿತವಾಗಿ ಈ ಭೂಮಿಗೆ ತರಲು ಗರ್ಭಿಣಿ ಸ್ತ್ರೀಯರಿಗೆ ಈ ಸಿಜೇರಿಯನ್ ಶಸ್ತ್ರ ಚಿಕಿತ್ಸೆ ಅತ್ಯವಶ್ಯಕವಾದದ್ದು ಪ್ರಸ್ತುತ ಸೌಂದರ್ಯ ಸ್ಪರ್ಧೆಯಲ್ಲಿ ಹೆಣ್ಣು ಮಕ್ಕಳು ತಮ್ಮ ಬದುಕಿನಲ್ಲಿ ಕಡ್ಡಾಯವಾಗಿ ಹೊಂದುವ ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಪಯಣವನ್ನು ಸ್ಪರ್ದಾಳು ತಾನು ಧ-ರಿಸಿದ ಗೌನ್ ನಲ್ಲಿ ಎಲ್ಲರಿಗೂ ಕಾಣುವಂತೆ ಮಾಡಿದ್ದಾಳೆ. ಪ್ರತಿ ಪದರದಲ್ಲೂ ಶಸ್ತ್ರ ಚಿಕಿತ್ಸೆಯ ನೋವು, ಸಂಕಟ, ತೀವ್ರ ಭಯದ ಹಿಂದೆ ತನ್ನ ಮಗುವನ್ನು ಈ ಭೂಮಿಗೆ ತರುವ ನಿಟ್ಟಿನಲ್ಲಿ ತಾಯಿಯ ಪ್ರಯತ್ನ ಹಾಗೂ ಆಕೆಯ ಅದುಮಿಟ್ಟ ಪ್ರೀತಿಯನ್ನು ನಾವು ಕಾಣಬಹುದು .
ಸಂಪೂರ್ಣ ಮೇಲ್ಭಾಗದಲ್ಲಿ ಮುತ್ತು ಹಾಗೂ ಕ್ರಿಸ್ಟಲ್ ಗಳ ಅಲಂಕಾರವನ್ನು ಹೊಂದಿರುವ ಅತ್ಯಂತ ಮೆದುವಾದ ಪೀಚ್ ಬಣ್ಣದ ಪದರವಿದ್ದರೆ ಒಳಗಿನ ಪದರಗಳು ನಮ್ಮ ದೇಹದ ಒಳಭಾಗದಲ್ಲಿ ಆಳವಾಗಿ ಕತ್ತರಿಸುತ್ತಾ ಹೋದಾಗ ದೊರೆಯುವಂತೆ ತೀವ್ರ ಕೆಂಪು ಹಾಗೂ ಬಗ90ಡಿ ಬಣ್ಣಗಳಲ್ಲಿ ಅನಾವರಣಗೊಳ್ಳುತ್ತಾ ಸಾಗುತ್ತದೆ.

ಈ ವಿನ್ಯಾಸವನ್ನು ಸೃಷ್ಟಿಸಿದ ವಿನ್ಯಾಸಕಾರಳಾದ ಉಗಾಂಡಾದ ಖ್ಯಾತ ವಿನ್ಯಾಸಗಾರ್ತಿ ಕೀಶಾ ಅಬ್ದುಲ್ಲಾ ಅವರು ಆಗ ತಾನೇ ತಾವು ಈ ಅನುಭವಕ್ಕೆ ಈಡಾಗಿ ತಮ್ಮ ಅನುಭವವನ್ನು ಬಟ್ಟೆಯ ಮೂಲಕ ವಿನ್ಯಾಸಗೊಳಿಸಿದ್ದಾರೆ. ಹೆಣ್ತನವು ಹೆಣ್ಣಿನ ದೇಹದ ಮೂಲಕ ಹೊರ ಬರುತ್ತಾ ಜಾಗತಿಕ ಚಮತ್ಕಾರವನ್ನು ಉಂಟುಮಾಡುವ ಹಾಗೂ ಈ ಬೃಹತ್ ಬ್ರಹ್ಮಾಂಡದೊಂದಿಗೆ ನಂಟನ್ನು ಹೊಂದುವ ಅದ್ಭುತ ಕ್ರಿಯೆ ಆಗಿ ಆಕೆ ತನ್ನ ದೃಷ್ಟಿಯನ್ನು ಸೂಚಿಸಿದ್ದಾಳೆ ಈ ಕುರಿತು ಆಕೆ ಹೀಗೆ ಬರೆದಿದ್ದಾಳೆ.

ಅತ್ಯಂತ ಸರಳವಾಗಿ ಒಬ್ಬ ಹೆಣ್ಣುಮಗಳು ಆಕೆ ಜಗತ್ತಿನ ಯಾವ ಮೂಲೆಯಿಂದಲೇ ಬಂದಿರಲಿ ತನ್ನ ದೇಹದ ಒಂದೊಂದೇ ಪದರಗಳನ್ನು ಮತ್ತೊಬ್ಬರೊಂದಿಗೆ ಹಂಚಿಕೊಂಡು ಮುಂದೆ ಸಾಗುತ್ತಾಳೆ ಎಂದು
ಹೀಗೆ ಏಳು ಪದರದ ದಿರಿಸು ಕೇವಲ ಫ್ಯಾಶನ್ ನ ಸಂಕೇತವಾಗಿಲ್ಲ ಇದು ತಮ್ಮ ಮಗುವಿಗಾಗಿ ತಮ್ಮ ದೇಹದ ಮೇಲೆ ಶಸ್ತ್ರಚಿಕಿತ್ಸೆಯ ಚಿತ್ತಾರವನ್ನು ಮೂಡಿಸಿಕೊಳ್ಳುವ ಆ ಎಲ್ಲ ತಾಯಂದಿರ ತ್ಯಾಗ, ಬಲ, ಸಾಮಥ-ರ್ಯಹಾಗೂ ಪ್ರೀತಿಯ ಸಂಕೇತವಾಗಿದೆ. ಹೆಣ್ಣಿನ ಈ ಅನುಭವವನ್ನು ಕಿರಿದೆಂದು ಭಾವಿಸಬೇಡಿ. ಅದೊಂದು ಅಸಾಧಾರಣವಾದ ಕ್ರಿಯೆ ಎಂದು ಕೀಶಾ ಹೇಳುತ್ತಾರೆ. ತನ್ನ ಹೊಟ್ಟೆಯಲ್ಲಿರುವ ಮಗುವನ್ನು ಭೇಟಿಯಾಗಲು ತಾಯಿ ಏಳು ಪದರದ ತನ್ನದೇ ಹೊಟ್ಟೆಯ ಚರ್ಮವನ್ನು ಕೊಯಿಸಿಕೊಂಡು ಭೇಟಿಯಾಗುವ ಅದ್ಭುತ ಸಾಧ್ಯತೆ.
ದ ಲೇಯರ್ಸ್ ಆಫ್ ಲೈಫ್ ಗೌನ್ ತಾಯಿ ತನ್ನ ಮಗುವಿನೊಂದಿಗೆ ಹಂಚಿಕೊಳ್ಳುವ ಪ್ರೀತಿ ಮತ್ತು ಮಮತೆಯ ವಿಶೇಷ ಬಾಂಧವ್ಯವನ್ನು ಸಂಭ್ರಮಿಸುತ್ತಿದೆ. ಇದೀಗ ಆ ಗೌನ್ ಕಲೆಯು ತನ್ನ ಸೌಂದರ್ಯಕ್ಕಿಂತ ಹೆಚ್ಚಿನ ಅರ್ಥವನ್ನು ಹೊಂದಿದೆ ಎಂಬುದನ್ನು ನಮಗೆ ನೆನಪಿಸುತ್ತದೆ.... ಏನಂತೀರಾ ಸ್ನೇಹಿತರೇ?



ವೀಣಾ ಹೇಮಂತ್ ಗೌಡ
ಪಾಟೀಲ, ಮುಂಡರಗಿ ಗದಗ.

# ನಾನು ನನ್ನದು ಎಂದು ಮರೆಯಬೇಡ

ಜೀವನದಲ್ಲಿ ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ, ತನ್ನ ಬೇರುಗಳನ್ನು ಮರೆಯಬಾರದು. ಹಣ, ಅಧಿಕಾರ, ಸ್ಥಾನಮಾನ, ಜನಪ್ರಿಯತೆ ಮತ್ತು ಯಶಸ್ಸು ಬಂದಾಗ "ಇದು ನನ್ನದು, ನಾನು ಮಾಡಿದ್ದು" ಎಂಬ ಹೆಮ್ಮೆ ಸಹಜ. ಆದ-'ರೆ ಆ ಹೆಮ್ಮೆ ಅಹಂಕಾರವಾಗಿ ಬದಲಾಗುವ ಕ್ಷಣದಿಂದಲೇ ಮನುಷ್ಯನ ನಿಜವಾದ ಪತನ ಆರಂಭವಾಗುತ್ತದೆ.

"ನಾನು ನನ್ನದು ಎಂದು ಮರೆಯಬೇಡ" ಎಂಬ ಮಾತು ನಮ್ಮ ಬದುಕಿಗೆ ಬಹಳ ದೊಡ್ಡ ಸಂದೇಶವನ್ನು ನೀಡುತ್ತದೆ. ಈ ಜಗತ್ತಿನಲ್ಲಿ ನಾವು ಯಾವುದನ್ನೂ ಶಾಶ್ವತವಾಗಿ ನಮ್ಮದಾಗಿಸಿಕೊಂಡು ಹೋಗಲು ಸಾಧ್ಯವಿಲ್ಲ. ಇಂದು ನಮ್ಮ ಕೈಯಲ್ಲಿರುವ ಅಧಿಕಾರ ನಾಳೆ ಮತ್ತೊಬ್ಬರ ಕೈಗೆ ಹೋಗಬಹುದು. ಇಂದು ಇರುವ ಹಣ ನಾಳೆ ಇರದಿರಬಹುದು. ಇಂದು ನಮ್ಮ ಸುತ್ತಲಿರುವ ಜನರು ನಾಳೆ ನಮ್ಮೊಂದಿಗೆ ಇರದೇ ಇರಬಹುದು. ಹಾಗಾದರೆ ಮರೆಯುವುದೇಕೆ?

ನಮ್ಮ ಯಶಸ್ಸಿನ ಹಿಂದೆ ನಮ್ಮ ಶ್ರಮದ ಜೊತೆಗೆ ಅನೇಕ ಜನರ ಸಹಕಾರವೂ ಇರುತ್ತದೆ. ತಂದೆ-ತಾಯಿಯ ತ್ಯಾಗ, ಕುಟುಂಬದ ಬೆಂಬಲ, ಸ್ನೇಹಿತರ ಪ್ರೋತ್ಸಾಹ, ಗುರುಗಳ ಮಾರ್ಗದರ್ಶನ ಹಾಗೂ ಸಮಾಜ ನೀಡಿದ ಅವಕಾಶ?ಇವೆಲ್ಲವೂ ನಮ್ಮ ಸಾಧನೆಯ ಭಾಗವೇ ಆಗಿವೆ. ಆದ್ದರಿಂದ ಯಶಸ್ಸು ಸಿಕ್ಕಾಗ "ನಾನು" ಎನ್ನುವುದಕ್ಕಿಂತ "ನಮ್ಮಿಂದ ಸಾಧ್ಯವಾಯಿತು" ಎನ್ನುವ ಮನೋಭಾವ ಬೆಳೆಸಿಕೊಳ್ಳಬೇಕು.

ಮರ ಎಷ್ಟೇ ಎತ್ತರಕ್ಕೆ ಬೆಳೆದರೂ ಅದರ ಬೇರುಗಳು ನೆಲದಲ್ಲೇ ಇರುತ್ತವೆ. ಅದೇ ರೀತಿ ಮನುಷ್ಯ ಎಷ್ಟೇ ದೊಡ್ಡವನಾದರೂ ತನ್ನ ಮೂಲವನ್ನು, ತನ್ನನ್ನು ಬೆಳೆಸಿದವರನ್ನು ಮತ್ತು ತನ್ನ ಹಿಂದಿನ ದಿನಗಳನ್ನು ಮರೆಯಬಾರದು.

ಅಹಂಕಾರದಿಂದ ಮಾತನಾಡುವ ವ್ಯಕ್ತಿಯನ್ನು ಜನ




ಕೆಲಕಾಲ ಗೌರವಿಸಬಹುದು; ಆದರೆ ವಿನಯದಿಂದ ನಡೆದುಕೊಳ್ಳುವ ವ್ಯಕ್ತಿಯನ್ನು ಜನ ಜೀವನಪೂರ್ತಿ ನೆನಪಿಸಿಕೊಳ್ಳುತ್ತಾರೆ. ಅಧಿಕಾರವಿರುವಾಗ ಎಲ್ಲರನ್ನೂ ಗೌರವಿಸುವುದು ನಿಜವಾದ ದೊಡ್ಡತನ. ದುರ್ಬಲರನ್ನು ತುಳಿದು ಮೇಲೆ ಏರುವುದು ಸಾಧನೆಯಲ್ಲ; ನಮ್ಮೊಂದಿಗೆ ಇರುವವರನ್ನೂ ಮೇಲಕ್ಕೆತ್ತುವುದು ನಿಜವಾದ ಸಾಧನೆ.

ಜೀವನ ಒಂದು ಚಕ್ರದಂತೆ. ಇಂದು ಮೇಲಿರುವವನು ನಾಳೆ ಕೆಳಗೆ ಬರಬಹುದು; ಇಂದು ಸಂಕಷ್ಟದಲ್ಲಿರುವವನು ನಾಳೆ ಯಶಸ್ಸಿನ ಶಿಖರ ತಲುಪಬಹುದು. ಆದ್ದರಿಂದ ಯಾರನ್ನೂ ಕಡಿಮೆ ಎಂದು ಕಾಣಬಾರದು. ಯಾರನ್ನೂ ಅವಮಾನಿಸಬಾರದು.

ನಮ್ಮ ಬಳಿ ಇರುವುದೆಲ್ಲವೂ ಶಾಶ್ವತವಲ್ಲ; ಆದರೆ ನಾವು ಇತರರ ಹೃದಯದಲ್ಲಿ ಬಿಟ್ಟುಹೋಗುವ ಒಳ್ಳೆಯ ನೆನಪುಗಳು ಮಾತ್ರ ಶಾಶ್ವತವಾಗಿರಬಹುದು.

ಹೀಗಾಗಿ ಹಣವಿದ್ದರೆ ಸಹಾಯ ಮಾಡೋಣ, ಅಧಿಕಾರವಿದ್ದರೆ ನ್ಯಾಯ ಮಾಡೋಣ, ಜ್ಞಾನವಿದ್ದರೆ ಹಂಚಿಕೊಳ್ಳೋಣ, ಯಶಸ್ಸು ಸಿಕ್ಕರೆ ಇತರರನ್ನೂ ಪ್ರೋತ್ಸಾಹಿಸೋಣ.

"ನಾನು" ಎಂಬ ಅಹಂಕಾರವನ್ನು ಬಿಟ್ಟು "ನಾವು" ಎಂಬ ಭಾವನೆ ಬೆಳೆಸಿಕೊಂಡಾಗ ಮಾತ್ರ ಸಮಾಜದಲ್ಲಿ ನಿಜವಾದ ಬದಲಾವಣೆ ಸಾಧ್ಯ.

ಕೊನೆಗೆ ಒಂದು ಸತ್ಯವನ್ನು ಸದಾ ನೆನಪಿನಲ್ಲಿಟ್ಟುಕೊಳ್ಳೋಣ?

ಇಲ್ಲಿ ಯಾವುದೂ ಶಾಶ್ವತವಾಗಿ ನಮ್ಮದಲ್ಲ. ನಾವು ಖಾಲಿ ಕೈಯಲ್ಲಿ ಬಂದಿದ್ದೇವೆ, ಖಾಲಿ ಕೈಯಲ್ಲೇ ಹೋಗುತ್ತೇವೆ.
ಆದರೆ ಹೋಗುವ ಮುನ್ನ ನಾವು ಮಾಡಿದ ಒಳ್ಳೆಯ ಕೆಲಸಗಳು, ತೋರಿದ ಮಾನವೀಯತೆ ಮತ್ತು ಗೆದ್ದ ಹೃದಯಗಳು ಮಾತ್ರ ನಮ್ಮ ನಿಜವಾದ ಸಂಪತ್ತು.
ಆದ್ದರಿಂದ?

"ನಾನು ನನ್ನದು ಎಂದು ಮರೆಯಬೇಡ;
ನಾಳೆ ಎಲ್ಲವೂ ಮತ್ತೊಬ್ಬರದು ಎಂಬ ಸತ್ಯವನ್ನು ಮರೆಯಬೇಡ."

# ವಿಜಯಪುರದಲ್ಲಿ ಮೂರು ದಿನಗಳ ನಾಟಕೋತ್ಸವ

**ಅ.ಶ. ಸುದ್ದಿ ವಿಜಯಪುರ**

**ವಿಜಯಪುರ: ಗ್ರಾಮೀಣ, ಹವ್ಯಾಸಿ ಹಾಗೂ ವೃತ್ತಿ ರಂಗಭೂಮಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ವಿಜಯಪುರದಲ್ಲಿ ಸೆ.10ರಿಂದ 12ರವರೆಗೆ ಮೂರು ದಿನಗಳ ವೃತ್ತಿ ರಂಗಭೂಮಿ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ. ನಾಗರಾಜಮೂರ್ತಿ ತಿಳಿಸಿದರು.**

ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ವಿವಿಧ ವೃತ್ತಿ ರಂಗಭೂಮಿ ಕಲಾವಿದರ ತಂಡಗಳಿಂದ ನಾಟಕ ಪ್ರದರ್ಶನ ನಡೆಯಲಿದೆ. ಸೆ.10ರಂದು 'ಗ್ರಾಮ ಪಂಚಾಯಿತಿ ಗಂಗವ್ವ', ಸೆ.11ರಂದು 'ಗಂಡನಿಗೆ ತಕ್ಕ ಹೆಂಡತಿ' ಹಾಗೂ ಸೆ.12ರಂದು 'ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ' ನಾಟಕಗಳು ಪ್ರದರ್ಶನಗೊಳ್ಳಲಿವೆ, ಕಳೆದ ಎರಡೂವರೆ ವರ್ಷಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಂಗಭೂಮಿ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಅಕಾಡೆಮಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.




ವಿಭಾಗೀಯ ಹಾಗೂ ಜಿಲ್ಲಾ ಮಟ್ಟದ ನಾಟಕೋತ್ಸವ, ಕಾಲೇಜು ವಿದ್ಯಾರ್ಥಿಗಳಿಗೆ ರಂಗ ತರಬೇತಿ ಶಿಬಿರ, ವಿಶ್ವ ರಂಗಭೂಮಿ ದಿನಾಚರಣೆ, ರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಹೊರನಾಡು ನಾಟಕೋತ್ಸವಗಳನ್ನು ನಡೆಸಲಾಗಿದೆ ಎಂದು ಹೇಳಿದರು. ರಂಗಭೂಮಿಗೆ ಸೇವೆ ಸಲ್ಲಿಸುತ್ತಿರುವ ಕಲಾವಿದರನ್ನು ಗುರುತಿಸಿ ಕಳೆದ ಎರಡೂವರೆ ವರ್ಷಗಳಲ್ಲಿ 160ಕ್ಕೂ ಹೆಚ್ಚು ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳ ಕಲಾವಿದರಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಅಕಾಡೆಮಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಬೆಂಗಳೂರು ಕಲಾ ಗ್ರಾಮದಲ್ಲಿ ಪ್ರತಿವರ್ಷ ಫೆಬ್ರವರಿ 1ರಿಂದ 6ರವರೆಗೆ ರಾಷ್ಟ್ರೀಯ ನಾಟಕೋತ್ಸವ ಹಾಗೂ ರಂಗ ಪರಿಷತ್ ಆಯೋಜಿಸಲಾಗುತ್ತಿದ್ದು, ದೇಶ-ವಿದೇಶಗಳ ನಾಟಕ ತಂಡಗಳು ಭಾಗವಹಿಸುತ್ತಿವೆ. ಈ ಬಾರಿ ಮೂರು ವಿದೇಶಿ, ಮೂರು ಹೊರರಾಜ್ಯ, ಐದು ರಂಗಾಯಣ ಹಾಗೂ ಆಯ್ದ 35 ನಾಟಕಗಳ ಪ್ರದರ್ಶನಕ್ಕೆ ಸಿದ್ಧತೆ ನಡೆಸಲಾಗಿದೆ ಎಂದು ತಿಳಿಸಿದರು. ಬಸವಣ್ಣನವರ ವಚನ ಚಳವಳಿಯ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ವೈಚಾರಿಕ ಸಂದೇಶವನ್ನು ಜನರಿಗೆ ತಲುಪಿಸುವ ಉದ್ದೇಶದಿಂದ 'ವಚನ ಕಲ್ಯಾಣ' ರಂಗರೂಪಕವನ್ನು ಸಿದ್ಧಪಡಿಸಲಾಗುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಯ್ಕೆಯಾದ 30 ಕಲಾವಿದರು ಇದರಲ್ಲಿ ಭಾಗವಹಿಸಲಿದ್ದು, ಖ್ಯಾತ ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ ಅವರ ನಿರ್ದೇಶನದಲ್ಲಿ ರೂಪುಗೊಳ್ಳುತ್ತಿದೆ.

ಕವಿ ಹಾಗೂ ನಾಟಕಕಾರ ಡಾ. ಕೆ.ವೈ. ನಾರಾಯಣಸ್ವಾಮಿ ಅವರು ಸಂಶೋಧನೆ ನಡೆಸಿ ಕೃತಿ ರೂಪಿಸಿದ್ದಾರೆ. ಶಶಿಧರ ಅಡಪ ಅವರು ರಂಗಸಜ್ಜಿಕೆ ಮತ್ತು ವಿನ್ಯಾಸ ನಿರ್ವಹಿಸಲಿದ್ದಾರೆ. ಈ ಯೋಜನೆಗೆ ಸರ್ಕಾರದಿಂದ ಈಗಾಗಲೇ ಒಂದು ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಪರಿಷ್ಕೃತ ಯೋಜನೆಯಡಿ ಒಟ್ಟು 2.15 ಕೋಟಿ ರೂ. ವೆಚ್ಚದಲ್ಲಿ ರಾಜ್ಯಾದ್ಯಂತ ಪ್ರದರ್ಶನ ಆಯೋಜಿಸಲಾಗುತ್ತಿದೆ. ನವೆಂಬರ್, ಡಿಸೆಂಬರ್ ಹಾಗೂ ಜನವರಿಯಲ್ಲಿ ಬೆಂಗಳೂರಿನ ಕಲಾ ಗ್ರಾಮ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರದರ್ಶನ ನಡೆಯಲಿದೆ. ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ, ಕೂಡಲಸಂಗಮ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿಯೂ ರಂಗರೂಪಕ ಪ್ರದರ್ಶಿಸುವ ಉದ್ದೇಶವಿದೆ ಎಂದು ನಾಗರಾಜಮೂರ್ತಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಾಟಕ ಅಕಾಡೆಮಿ ಸದಸ್ಯೆ ಜ್ಯೋತಿ ಮಂಗಳೂರು, ಮಾಜಿ ಅಧ್ಯಕ್ಷ ಶೇಖ್ ಮಾಸ್ತರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಭೋವಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಕೊಪ್ಪಳ ನಗರಸಭೆ :ಗಣೇಶ ಹಬ್ಬದ ಪ್ರಯುಕ್ತ ಬೀದಿ ದೀಪಗಳಿಂದ ನೇರ ವಿದ್ಯುತ್ ಸಂಪರ್ಕ ನಿಷೇಧ

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಗೌರಿ-ಗಣೇಶ ಹಬ್ಬದ ಆಚರಣೆ ಹಿನ್ನೆಲೆಯಲ್ಲಿ ಸಾರ್ವಜನಿಕವಾಗಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಮಂಡಳಿಗಳು ಮತ್ತು ಸಂಘ-ಸಂಸ್ಥೆಗಳು ನಗರಸಭೆಯ ಬೀದಿ ದೀಪಗಳ ಕಂಬಗಳಿಂದ ನೇರವಾಗಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.**

ಹಬ್ಬದ ಸಂದರ್ಭದಲ್ಲಿ ನಗರದ ಪ್ರಮುಖ ರಸ್ತೆ ಹಾಗೂ ಬಡಾವಣೆಗಳಲ್ಲಿ ನಿರ್ಮಿಸುವ ಗಣೇಶ ಮಂಟಪಗಳು ಮತ್ತು ಬೆಳಕಿನ ವ್ಯವಸ್ಥೆಗೆ ಬೀದಿ ದೀಪಗಳ ಲೈನ್‌ಗಳಿಗೆ ನೇರವಾಗಿ ವೈಯರ್ ಜೋಡಿಸುವುದರಿಂದ ಶಾರ್ಟ್ ಸರ್ಕ್ಯೂಟ್ ಉಂಟಾಗುತ್ತಿದೆ. ಇದರಿಂದ ನಗರದಾದ್ಯಂತ ಬೀದಿ ದೀಪಗಳ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯ ಉಂಟಾಗಿ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ತಾತ್ಕಾಲಿಕವಾಗಿ ಗಣೇಶ ಮೂರ್ತಿ ಪ್ರತಿಷ್ಠಾಪಿಸುವ ಪ್ರತಿಯೊಂದು ಸಮಿತಿಯವರು ನಿಯಮಾನುಸಾರ ಜೆಸ್ಕಾಂ ಇಲಾಖೆಗೆ ಅರ್ಜಿ ಸಲ್ಲಿಸಿ, ಕಡ್ಡಾಯವಾಗಿ ತಾತ್ಕಾಲಿಕ ವಿದ್ಯುತ್ ಮೀಟರ್ ಪಡೆದುಕೊಂಡು ಬೆಳಕಿನ ವ್ಯವಸ್ಥೆ ಮಾಡಿಕೊಳ್ಳಬೇಕು. ಅನಧಿಕೃತವಾಗಿ ಬೀದಿ ದೀಪದ ಕಂಬಗಳಿಂದ ನೇರ ವಿದ್ಯುತ್ ಸಂಪರ್ಕ ಪಡೆದಿರುವುದು ಕಂಡುಬಂದಲ್ಲಿ, ಅಂತಹ ಸಮಿತಿಗಳು ಮತ್ತು ಆಯೋಜಕರ ವಿರುದ್ಧ ನಿಯಮಾನುಸಾರ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುವುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆ.12 ರಂದು ಅಳವಂಡಿಯಲ್ಲಿ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನ ಸಭೆ

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಕೊಪ್ಪಳ ಜಿಲ್ಲೆಯ ಸಾರ್ವಜನಿಕರ ಕುಂದು-ಕೊರತೆಗಳನ್ನು ಶೀಘ್ರವಾಗಿ ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರದ ಆದೇಶದಂತೆ ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದಲ್ಲಿ ಸೆಪ್ಟೆಂಬರ್ 12 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ 'ಪ್ರಜಾಸೇವಾ ಆಂದೋಲನ' ಸಭೆಯನ್ನು ಹಮ್ಮಿಕೊಳ್ಳಲಾಗಿದೆ.**

ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಜರುಗಲಿರುವ ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಪೊಲೀಸ್ ಅಧೀಕ್ಷಕರು/ಆಯುಕ್ತರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸೇರಿದಂತೆ ಪ್ರಮುಖ ಅಧಿಕಾರಿಗಳು ಭಾಗವಹಿಸಿ ಸಾರ್ವಜನಿಕರ ಕುಂದು-ಕೊರತೆಗಳ ಬಗ್ಗೆ ಚರ್ಚೆ ನಡೆಸಲಿದ್ದು, ಅಳವಂಡಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಈ 'ಪ್ರಜಾಸೇವಾ ಆಂದೋಲನ'ದ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದೆ. ಸಭೆಯನ್ನು ಪರಿಣಾಮಕಾರಿಯಾಗಿ ಆಯೋಜಿಸಿ, ಸಾರ್ವಜನಿಕರಿಗೆ ಸೂಕ್ತ ಫಲಿತಾಂಶ ಹಾಗೂ ಪರಿಹಾರ ಒದಗಿಸುವ ಉದ್ದೇಶ ಹೊಂದಿದ್ದು, ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಸರ್ಕಾರದ ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಕೊಪ್ಪಳ ತಾಲೂಕುವಾರು ಸಂಪೂರ್ಣ ಮಾಹಿತಿಯೊಂದಿಗೆ ಕಡ್ಡಾಯವಾಗಿ ಹಾಜರಾಗಬೇಕು. ಒಂದು ವೇಳೆ ಅಧಿಕಾರಿಗಳು ಸಭೆಗೆ ಗೈರು ಹಾಜರಾದಲ್ಲಿ ಅಥವಾ ಅಪೂರ್ಣ ಮಾಹಿತಿಯೊಂದಿಗೆ ಸಭೆಗೆ ಆಗಮಿಸಿದಲ್ಲಿ ಅಂತಹವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ.ಸುರೇಶ್ ಬಿ. ಇಟ್ನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮಕ್ಕೆ ಬಸವರಾಜ ರಾಯರೆಡ್ಡಿ ಅಧ್ಯಕ್ಷತೆ

**ಅ.ಶ. ಸುದ್ದಿ ಕುಕನೂರು**

**ಕುಕನೂರು: ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಕುಕನೂರು ತಾಲೂಕಿನಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಅರ್ಹರಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮ 'ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**



ಸೆಪ್ಟೆಂಬರ್ 12ರಂದು ಬೆಳಗ್ಗೆ 10 ಗಂಟೆಗೆ ಮಂಗಳೂರು ಗ್ರಾಮದ ಬಾಪೂಜಿ ಡಿಗ್ರಿ ಕಾಲೇಜು ಆವರಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿ, ಉನ್ನತ ಶಿಕ್ಷಣ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು ವಹಿಸಲಿದ್ದಾರೆ. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಲಿದ್ದು, ಆದಾಯ, ಸಮಾಜ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ಆರೋಗ್ಯ ಸೇರಿದಂತೆ ವಿವಿಧ ಇಲಾಖೆಗಳ ಸೌಲಭ್ಯಗಳ ಕುರಿತು ಮಾಹಿತಿ ನೀಡಲಿದ್ದಾರೆ. ಸಾರ್ವಜನಿಕರು ತಮ್ಮ ಅಗತ್ಯ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಿ ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಗ್ರಾಮಸ್ಥರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತಮ್ಮ ಕುಂದುಕೊರತೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಪಡೆದುಕೊಳ್ಳುವಂತೆ ತಹಶೀಲ್ದಾರ್ ಅವರು ಮನವಿ ಮಾಡಿದ್ದಾರೆ.

# ಯಲಬುರ್ಗಾದಲ್ಲಿ ಭಕ್ತಿಭಾವದಿಂದ ವೀರಭದ್ರೇಶ್ವರ ಜಯಂತೋತ್ಸವ

**ಅ.ಶ. ಸುದ್ದಿ ಯಲಬುರ್ಗಾ**

**ಯಲಬುರ್ಗಾ: ಪಟ್ಟಣದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತ ನಡೆಯುತ್ತಿದ್ದ ರುದ್ರಾಭಿಷೇಕದ ಸಮಾರೋಪ ಹಾಗೂ ವೀರಭದ್ರೇಶ್ವರ ಜಯಂತೋತ್ಸವ ಕಾರ್ಯಕ್ರಮ ಶುಕ್ರವಾರ ಭಕ್ತಿಭಾವ ಹಾಗೂ ಸಡಗರದಿಂದ ಜರುಗಿತು.**

**ಜಯಂತೋತ್ಸವದ ಅಂಗವಾಗಿ ಬೆಳಿಗ್ಗೆ ದೇವಸ್ಥಾನದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಮೂರ್ತಿಗೆ ವಿಶೇಷ ರುದ್ರಾಭಿಷೇಕ, ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸಲಾಯಿತು.**

ಬಳಿಕ ದೇವಸ್ಥಾನದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೀರಭದ್ರೇಶ್ವರ ಜಯಂತೋತ್ಸವವನ್ನು ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನ ಕಮಿಟಿ ಅಧ್ಯಕ್ಷ ಸಂಗಣ್ಣ ಟೆಂಗಿನಕಾಯಿ ಮಾತನಾಡಿ, "ವೀರಭದ್ರೇಶ್ವರರು ಅವತಾರ ಪುರುಷರಾಗಿದ್ದು, ಪವಾಡ ಪುರುಷರಾಗಿ ಭಕ್ತರ ನಂಬಿಕೆ ಹಾಗೂ ಆರಾಧನೆಗೆ ಪಾತ್ರರಾಗಿದ್ದಾರೆ. ಅವರ ಆದ-ʼಶ ಹಾಗೂ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದು ಹೇಳಿದರು.



ಜಯಂತೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದ್ದು, ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಶ್ರೀ ವೀರಭದ್ರೇಶ್ವರ ಸ್ವಾಮಿಯ ದರ್ಶನ ಪಡೆದು ಆಶೀರ್ವಾದ ಪಡೆದರು.

ಕಾರ್ಯಕ್ರಮದಲ್ಲಿ ಶಿವಪ್ಪ ಶಾಸ್ತ್ರೀ, ಮುದಕಪ್ಪ ಸಜ್ಜನ, ಶಿವಕುಮಾರ ಸರಗಣಾಚಾರ, ವೀರುಪಾಕ್ಷಯ್ಯ ಪರಯ್ಯನಮಠ, ಅಡಿವೆಯ್ಯ ಕಲ್ಯಾಣಮಠ, ಶರಣಯ್ಯ ಸಾಲಿಮಠ, ದೇವಪ್ಪ ಶಾಸ್ತ್ರೀ, ವಿಶ್ವನಾಥ ಯಲಬುರ್ಗಿ, ವಿಶ್ವನಾಥ ಗಂಗಾವತಿ, ವೀರೇಶ ಹಡಪದ, ವೀರಣ್ಣ ಹಡಗಲಿ, ಶರಣಪ್ಪ ಹಡಗಲಿ, ಅಂದಪ್ಪ ಬೇಲೇರಿ, ವೀರಭದ್ರಪ್ಪ ಹಡಪದ, ಶರಣಪ್ಪ ಹಡಪದ ಸೇರಿದಂತೆ ದೇವಸ್ಥಾನ ಕಮಿಟಿಯ ಪದಾಧಿಕಾರಿಗಳು, ಸದಸ್ಯರು ಹಾಗೂ ಅಪಾರ ಸಂಖ್ಯೆಯ ಭಕ್ತರು ಉಪಸ್ಥಿತರಿದ್ದರು.

# ಎಸ್‌ಐಆರ್: ಸೆ.23ರವರೆಗೆ ಹಕ್ಕು-ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

**ಅ.ಶ. ಸುದ್ದಿ ವಿಜಯಪುರ**

**ವಿಜಯಪುರ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಡಿ ಸೆ.23ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವಿದ್ದು, ಅರ್ಹ ಮತದಾರರ ಹೆಸರುಗಳು ಪಟ್ಟಿಯಿಂದ ಹೊರಗುಳಿಯದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಆನಂದ ಕೆ. ತಿಳಿಸಿದ್ದಾರೆ.**

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಆಗಸ್ಟ್ 24ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದೆ. ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದ ಅರ್ಹ ಮತದಾರರು ಹಾಗೂ ಅಕ್ಟೋಬರ್ 1, 2026ಕ್ಕೆ 18 ವರ್ಷ ಪೂರ್ಣಗೊಳ್ಳುವ ಯುವಕ?ಯುವತಿಯರು ನಮೂನೆ-6ರ ಮೂಲಕ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು ಎಂದರು.



ಆಗಸ್ಟ್ 24ರಿಂದ ಸೆ.9ರವರೆಗೆ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 6,526 ಅರ್ಜಿಗಳು ಸ್ವೀಕೃತವಾಗಿವೆ. ಇದರಲ್ಲಿ 3,754 ನಮೂನೆ-6, 24 ನಮೂನೆ-7 ಹಾಗೂ 2,748 ನಮೂನೆ-8ರ ಅರ್ಜಿಗಳಾಗಿವೆ. ಜಿಲ್ಲೆಯಲ್ಲಿ ಗಣತಿ ನಮೂನೆಗಳೊಂದಿಗೆ ಹೊಂದಾಣಿಕೆಯಾಗದ ಕಾಗುಣಿತ ದೋಷಗಳು ಹಾಗೂ ಮ್ಯಾಪಿಂಗ್ ಆಗದ 24,529 ಪ್ರಕರಣಗಳು ಗುರುತಿಸಲ್ಪಟ್ಟಿವೆ. ಮತದಾರರು ತಹಶೀಲ್ದಾರ ಕಚೇರಿ, ಬಿಎಲ್‌ಒಗಳನ್ನು ಸಂಪರ್ಕಿಸುವುದರ ಜೊತೆಗೆ ಮತದಾರರ ಸೇವಾ ಪೋರ್ಟಲ್ ಮೂಲಕವೂ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು. ಸೆ.19 ಮತ್ತು 20ರಂದು ಜಿಲ್ಲೆಯಾದ್ಯಂತ ವಿಶೇಷ ಆಂದೋಲನ ನಡೆಸಲಾಗುತ್ತಿದ್ದು, ಪ್ರತಿಯೊಂದು ಮತಗಟ್ಟೆಯಲ್ಲೂ ಬಿಎಲ್‌ಒಗಳು ಲಭ್ಯವಿರಲಿದ್ದಾರೆ. ಆಕ್ಷೇಪಣೆಗಳನ್ನು ಸಗಟಾಗಿ ಸಲ್ಲಿಸಲು ಅವಕಾಶವಿಲ್ಲ; ಪ್ರತಿಯೊಂದು ಆಕ್ಷೇಪಣೆಗೆ ಪ್ರತ್ಯೇಕ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು.

ನೋಟಿಸ್ ಪಡೆದ ಮತದಾರರು ನಿಗದಿತ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅಗತ್ಯ ದಾಖಲೆಗಳೊಂದಿಗೆ ಹಾಜರಾಗಿ ವಿಚಾರಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

# ಎಸ್. ಡಿ. ಎಮ್. ಸಿ ತಾಲೂಕಾಧ್ಯಕ್ಷರ ಹಾಗೂ ವಿವಿಧ ಶಾಲೆಗಳ ಅಧ್ಯಕ್ಷರ ಸಭೆ

**ಅ.ಶ. ಸುದ್ದಿ ಕುಕನೂರು**

**ಕುಕನೂರು: ಎಸ್. ಡಿ. ಎಮ್. ಸಿ ಯಲ್ಲಿ ಸಾಕಷ್ಟು ಸಮಸ್ಯೆಗಳಿವೆ, ಅದರಲ್ಲಿ ಮೊದಲೆಯನದಾಗಿ ಶಾಲಾ ಮಕ್ಕಳಿಗೆ. ಶೂ ಹಾಗೂ ಸಾಕ್ಸ್ ವಿತರಣೆಯಲ್ಲಿ ಲೋಪ ದೋಷಗಳಿದ್ದು, ಕಳಪೆ ಮಟ್ಟದ ಶೂ ಹಾಗೂ ಸಾಕ್ಸ್ಗಳನ್ನು ವಿತರಿಸಲಾಗುತ್ತಿದೆ ಎನ್ನುವ ಗಂಭೀರ ಆರೋಪಗಳು ಕೇಳಿಬರುತ್ತಿವೆ ಎಂದು ಖಆಒಅ ಜಿಲ್ಲಾಧ್ಯಕ್ಷ ದೇವರಾಜ ಕಿನ್ನಾಳ ಆರೋಪಿಸಿದರು.**

ಅವರು ಶುಕ್ರವಾರದಂದು ಪಟ್ಟಣದ ನೀರಿಕ್ಷಣಾ ಮಂದಿರದಲ್ಲಿ ಕರೆದ ಖಆಒಅ ಅಧ್ಯಕ್ಷರ ಹಾಗೂ ಸದಸ್ಯರ ಸಭೆಯಲ್ಲಿ ಮಾತನಾಡಿ ನಮ್ಮ ಭಾಗದಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಾಗಿರುವುದರಿಂದ ಕೆಲವೊಂದಿಷ್ಟು ಮಕ್ಕಳು ಶೂ ಧರಿಸಿದಾಗ ಕಾಲು ಇನ್ಫೆಕ್ಸನ್ ಆಗಿ ಕಾಲುಗಳಲ್ಲಿ ತೊಂದರೆಯಾಗುತ್ತದೆ. ಶಾಲೆಯಿಂದ ಮಕ್ಕಳ ಹಾಜರಿಗೆ ಅನುಗುಣವಾಗಿ ಬೇಡಿಕೆ ಪಡೆದು, ವಿದ್ಯಾರ್ಥಿಗಳಿಗೆ ತಕ್ಕಂತೆ ಸ್ಯಾಂಡಲ್, ಶೂಗಳನ್ನು ವಿತರಿಸಬೇಕು. ಅದು



ಗುಣ ಮಟ್ಟದಿಂದ ಕೂಡಿದ ಶೂ ಮತ್ತು ಸಾಕ್ಸ್ ಗಳನ್ನು ಪೂರೈಸಬೇಕು ಎಂದು ಆಗ್ರಹಿಸಿದರು. ಈಗ ಶಾಲಾ ಮಕ್ಕಳಿಗೆ ಬಂದಿರುವ ಶೂ ಹಾಗೂ ಸಾಕ್ಸ್ ಕಳಪೆ ಮಟ್ಟದಿಂದ ಕೂಡಿದ್ದು, ಇವುಗಳನ್ನು ಡಿಡಿಪಿಐ ಹಾಗೂ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಗುಣ ಮಟ್ಟ ಪರೀಶಿಲಿಸಿ ವಿತರಿಸಬೇಕು ಎಂದು ಆಗ್ರಹಿಸಿದರು. ಉತ್ತಮ ಕಂಪನಿಯಿಂದ ತಯಾರಾಗಿರುವ ಶೂ ಮತ್ತು ಸಾಕ್ಸ್ ಗಳನ್ನು ವಿತರಿಸಬೇಕು, ರಾಜ್ಯ ಸರಕಾರ ಯಾವುದೋ ಲೋಕಲ್ ಕಂಪನಿ ಶೂ, ಸಾಕ್ಸ್ ಕೊಡಲು ಮುಂದಾಗಿರುವುದು ಖಂಡನೀಯವಾಗಿದೆ ಎಂದರು.

ಈ ಕುರಿತ ಜಿಲ್ಲಾ ಶಾಲಾ ಶಿಕ್ಷಣಾಧಿಕಾರಿಗಳು ಡಿಡಿಪಿಐ ಹಾಗೂ ತಾಲ್ಲೂಕ ಕ್ಷೇತ್ರ ಶಿಕ್ಷಣಾಧಿಕಾರಿಗಳು ಗಮನ ಹರಿಸಿ ಕಳಪೆ ಮಟ್ಟದ ಶೂ ಹಾಗೂ ಸಾಕ್ಸ್ ಗಳನ್ನು ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡದೇ, ಸುಮಾರು ಹತ್ತು ತಿಂಗಳಾದರೂ, ಬಾಳಿಕೆ ಬರುವಂತಹ ಉತ್ತಮ ಕಂಪನಿಗಳ ಶೂ, ಸಾಕ್ಸ್ ವಿತರಿಸಬೇಕು ಎಂದು ಆಗ್ರಹಿಸಿದರು. 104 ಕೋಟಿಗೆ ಶೂ ಮತ್ತು ಸಾಕ್ಸ್ ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆದಿದ್ದು ರಾಜ್ಯದ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣ ಮಟ್ಟದ ಶೂ ಮತ್ತು ಸಾಕ್ಸ್ ಒದಗಿಸಲು ಕ್ರಮ ಕೈಗೊಳ್ಳಬೇಕು. ಆದರೆ ಅವೆಲ್ಲವು ಕಳಪೆ ಮಟ್ಟದಿಂದ ಕೂಡಿವೆ ಎಂದರು.

ಅದರ ಪರೀಶಿಲನೆ ಅಗತ್ಯವಾಗಿದ್ದು, ರಾಜ್ಯ ಸರಕಾರದ ಶಿಕ್ಷಣ ಇಲಾಖೆ ಇದರ ಕುರಿತು ಪರೀಶಿಲನೆ ನಡೆಸಿ ನಂತರ ವಿದ್ಯಾರ್ಥಿಗಳಿಗೆ ವಿತರಿಸಲು ಮುಂದಾಗಬೇಕು ಎಂದರು. ನಮ್ಮ ಜಿಲ್ಲೆಗೆ ಹಾಗೂ ತಾಲೂಕಿಗೆ ಪೂರೈಕೆಯಾಗಿರು ಶೂ ಮತ್ತು ಸಾಕ್ಸ್ ಗಳ ಪರೀಶಿಲನೆಗೆ ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ ಶಿಕ್ಷಣ ಇಲಾಖೆಗೆ ಕಟ್ಟು ನಿಟ್ಟಿನ ಆದೇಶ ನೀಡಿ ಗುಣ ಮಟ್ಟದ ಶೂ ಮತ್ತು ಸಾಕ್ಸ್ ವಿತರಿಸುವಂತೆ ಸೂಚಿಸಬೇಕು ಎಂದು ಆಗ್ರಹಿಸಿದರು. ಯಲಬುರ್ಗಾ ಹಾಗೂ ಕುಕನೂರು ತಾಲ್ಲೂಕಿನಲ್ಲಿ ಒಟ್ಟು ವಿದ್ಯಾರ್ಥಿಗಳಿಗೆ ಬೇಕಾಗಿರುವ ಶೂಗಳು 39737ಜೊತೆ ಶೂ ಹಾಗೂ ಸಾಕ್ಸಗಳ ಬೇಡಿಕೆ ಇದೆ. ಈಗ ಬಂದಿರುವ ಶೂಗಳು 30062 ಜೊತೆ ಶೂ ಹಾಗೂ ಸಾಕ್ಸಗಳ ಪೂರೈಕೆಯಾಗಿವೆ.

ಇನ್ನೂ ಬರಬೇಕಾದ 9675 ಜೊತೆ ಶೂ ಮತ್ತು ಸಾಕ್ಸ್ ಗಳ ಬೇಡಿಕೆ ಇದ್ದು, ಉತ್ತಮ ಕಂಪನಿಯ ಗುಣ ಮಟ್ಟದ ಶೂ ಹಾಗೂ ಸಾಕ್ಸ್ ಗಳನ್ನು ತ್ವರಿತ ಗತಿಯಲ್ಲಿ ವಿತರಿಸಬೇಕು ಇಲ್ಲವಾದಲ್ಲಿ ಜಿಲ್ಲಾಖಆಒಅ ಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

23ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ದೇವರಾಜ ಕಿನ್ನಾಳ. ಪ್ರಧಾನ ಕಾರ್ಯದರ್ಶಿ ಕವಿತಾ ಕಾಸರ, ಕುಕನೂರು ತಾಲ್ಲೂಕಾಧ್ಯಕ್ಷ ನಿಂಗಪ್ಪ ಗೊಡೆಕರ್, ಕುಕನೂರು ತಾಲ್ಲೂಕ ಉಪಾಧ್ಯಕ್ಷ ಅಧ್ಯಕ್ಷ ಲಕ್ಷ್ಮಣ ಕಾಳಿ, ಸಿದ್ನೇಕೊಪ್ಪ ಅಧ್ಯಕ್ಷ ಶರಣಪ್ಪ ಲಕ್ಷಟ್ಟಿ, ಕರಮುಡಿ ಅಧ್ಯಕ್ಷ ಗೌಡಪ್ಪ ಬಲಕುಂದಿ, ಬೆಣಕಲ್ ಅಧ್ಯಕ್ಷ ಗವಿಸಿದ್ದಪ್ಪ ಚಕ್ರಸಾಲಿ, ನಿಟ್ಟಾಲಿ ಅಧ್ಯಕ್ಷ ಯಲ್ಲಪ್ಪ ಕುರಿ, ಉಮೇಶ ಹಂಡಿ ಸೇರಿದಂತೆ ಇತರರು ಇದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka